ಸಂಪುಟ 01 | ಸಂಚಿಕೆ 50 | ಬುಧವಾರ 31 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**ಹೊಸ ವರ್ಷದ ರಾತ್ರಿ–New Year's Eve**

ಇದು ಗ್ರೆಗೋರಿಯನ್ ಕ್ಯಾಲೆಂಡರ್ನ ಕೊನೆಯ ದಿನವಾಗಿದ್ದು, ಹೊಸ ವರ್ಷದ ಪ್ರಾರಂಭಕ್ಕೆ ಪ್ರಯಾಣಿಸುವ ದಿನ ಎಂದು ಜಾಗತಿಕವಾಗಿ ಆಚರಿಸಲಾಗುತ್ತದೆ. ಜನರು ಸಾಮಾನ್ಯವಾಗಿ ರಾತ್ರಿಯಂದು 31–ರಿಂದ 1–ಕ್ಕೆ ಮಿಡ್ನ್ ವರೆಗೆ ಪಾರ್ಟಿಗಳು, ಜತೆಗೂಡುವಿಕೆ, ಫೈರ್ವರ್ಕ್ಸ್ ಮತ್ತು ಮುಗ್ಗರು ಮುಚ್ಚುವ ಸಮಾರಂಭಗಳನ್ನು ಮಾಡುತ್ತಾರೆ. ಅನೇಕ ಪ್ರದೇಶಗಳಲ್ಲಿ ಮಿಡ್ನ್ ಹೊಟ್ಟೆ ಹೊತ್ತು ಹೊಸ ವರ್ಷದ ಬರವಣಿಗೆಯನ್ನು ಆಚರಿಸಲಾಗುತ್ತದೆ ಹಚ್ಚಿ ಕುಶಲತೆ, ಸಂತೋಷ ಮತ್ತು ಹೊಸ ಆರಂಭದ ಆಶಯಗಳು.

## ಸುಭಾಷಿತ

ಜ್ಞಾನದ ಏಕೈಕ ಉದ್ದೇಶ, ಮನಸ್ಸಿಗೆ ಶಕ್ತಿ ನೀಡುವುದು ಮತ್ತು ಮನಸ್ಸನ್ನು ಶಿಸ್ತಿಗೆ ಒಳಪಡಿಸುವುದು.

ಸ್ವಾಮಿ ವಿವೇಕಾನಂದ

# ಕೋಗಿಲು ಬಡಾವಣೆಯ ಅಕ್ರಮ ವಾಸಿಗಳಿಗೆ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ



**ಬೆಂಗಳೂರು: ಸರ್ಕಾರ ಮತ್ತು ಪ್ರತಿಪಕ್ಷಗಳ ನಡುವೆ ತೀವ್ರ ಜಟಾಪಟಿಗೆ ಕಾರಣವಾಗಿರುವ ನಗರದ ಕೋಗಿಲು ಲೇಔಟ್‌ನಲ್ಲಿ ವಲಸಿಗರ ಮನೆ ನಿರ್ಮಾಣ ತೆರವುಗೊಳಿಸಿದ ಬೆನ್ನಲ್ಲೇ ಸಮರೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸಲಾಯಿತು. ಯಲಹಂಕ ಉತ್ತರ ವಲಯದ ಜಂಟಿ ಆಯುಕ್ತ ಮೊಹಮದ್ ನಹೀಮ್ ಕೂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರಾಜೀವ್ ಗಾಂಧಿ ವಸತಿ ಯೋಜನೆ ಅಧಿಕಾ–ರಿಗಳು, ಬೆಂಗಳೂರು ಉತ್ತರ ಪಾಲಿಕೆ ಅಧಿಕಾ–ರಿಗಳು, ಜಿಲ್ಲಾಡಳಿತದಿಂದ ದಾಖಲೆ ಪರಿಶೀಲನೆ ನಡೆದಿದ್ದು, ಯಲಹಂಕ ತಹಶೀಲ್ದಾರ್ ಶ್ರೇಯಸ್ ರಾಜೀವ್ ಗಾಂಧಿ ವಸತಿ ನಿಗಮ ಡೈರೆಕ್ಟರ್ ಪರಶುರಾಮ್ ಸ್ಥಳಕ್ಕೆ ಭೇಟಿ ನೀಡಿದ್ದರು.**

ಯಾರ ಬಳಿ ಕರ್ನಾಟಕದವರು ಅನ್ನೋದಕ್ಕೆ ದಾಖಲೆ ಇರುತ್ತೆ ಅಂತಹವರಿಗೆ ಮಾತ್ರ ರಾಜೀವ್ ಗಾಂಧಿ ಯೋಜನೆಯಡಿ ಮನೆ ಲಭ್ಯವಾಗಲಿದೆ. ಸದ್ಯ ಸ್ಥಳದಲ್ಲಿ 3 ಟೀಮ್ ದಾಖಲೆ ಪರಿಶೀಲನೆ ನಡೆಸಿದ್ದಾರೆ.ಎರಡು ದಿನದಲ್ಲಿ ಸ್ಥಳಕ್ಕೆ ಭೇಟಿ ಕೊಟ್ಟು ಸಮೀಕ್ಷೆ ನಡೆಸಿ ವರದಿ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ ಕೊಟ್ಟ ಬೆನ್ನಲ್ಲೇ ವಿವಿಧ ಇಲಾಖೆಗಳ ಅಧಿಕಾ–ರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ವಸತಿ ಇಲಾಖೆಯಡಿ ನಿರ್ಗತಿಕರಿಗೆ ಮನೆ ಕಟ್ಟಿಸಿಕೊಡುವುದಾಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಚಿತಪಡಿಸಿದ್ದಾರೆ. ಹೀಗಾಗಿ ಕೋಗಿಲು ಲೇಔಟ್‌ನಲ್ಲಿ ಜಿಬಿಎ ಮತ್ತು ಜಿಲ್ಲಾಡಳಿತದಿಂದ ಸರ್ವೆ ನಡೆಸಿದೆ. ನಿರಾಶ್ರಿತರಿಂದ ದಾಖಲಾತಿ ಸಂಗ್ರಹ ಕಾರ್ಯ ನಡೆಸಲಾಯಿತು.

ಈ ಪ್ರದೇಶಕ್ಕೆ ನೀವು ಯಾವಾಗ ಬಂದಿದ್ದೀರಿ?, ಇಲ್ಲಿ ಮನೆ ನಿರ್ಮಾಣ ಮಾಡಲು ಅವಕಾಶ ಕೊಟ್ಟ ಸ್ಥಳೀಯ ಆಡಳಿತ ಯಾವುದು?, ನಿಮ ಬಳಿ ಯಾರಾದರೂ ಖಾಯಂ ನಿವಾಸ ಪತ್ರ ನೀಡುತ್ತೇನೆಂದು ಹಣ ಪಡೆದಿದ್ದರೇ?, ಆಧಾರ್ ಕಾರ್ಡ್ , ಮತದಾರರ ಗುರುತಿನ ಚೀಟಿ, ಪಡಿತರ ಚೀಟಿ ಕೊಟ್ಟವರು ಯಾರು?, ಇದಕ್ಕೆ ಸಲ್ಲಿಸಿದ ಸಾಕ್ಷ್ಯಾಧಾರಗಳು ಏನು? ಎಂಬುದೂ ಸೇರಿದಂತೆ ಅಧಿಕಾರಿಗಳ ತಂಡ ಸಂತ್ರಸ್ತರಿಂದ ಮಾಹಿತಿ ಪಡೆದುಕೊಂಡಿತು. ಮನೆ ನೀಡಲು ನಿರಾಶ್ರಿತರಿಂದ ದಾಖಲಾತಿ ಸಂಗ್ರಹ ಕಾರ್ಯ ನಡೆಸಲಾಯಿತು. ರಾಜೀವ್ ಗಾಂಧಿ ವಸತಿ ಯೋಜನೆ ಅಧಿಕಾ–ರಿಗಳಿಂದ ಕೂಡ ದಾಖಲಾತಿ ಸಂಗ್ರಹವಾಗಿದೆ.

ಮೂರು ಇಲಾಖೆಯ ಅಧಿಕಾ–ರಿಗಳಿಂದ ಪರಿಶೀಲನೆ ಕಾರ್ಯ ನಡೆಸಿದರು. ರಾಜೀವ್ ಗಾಂಧಿ ಮತ್ತು ಒಂಟಿ ಮನೆ ಯೋಜನೆ ಅಡಿ ಸೌಲಭ್ಯ ನೀಡಲು ದಾಖಲಾತಿ ಸಂಗ್ರಹ ಕಾರ್ಯ ನಡೆಸಿದರು. ಪ್ರತಿ ಮನೆಯಿಂದ ಐದು ದಾಖಲೆಗಳನ್ನು ಪರಿಶೀಲನೆ ನಡೆಸಿದ ಅಧಿಕಾರಿಗಳು ಗುರುತಿನ ಚೀಟಿ, ಕರೆಂಟ್ ಬಿಲ್, ಆಧಾರ್ ಕಾರ್ಡ್, ತಾತ್ಕಾಲಿಕ ಆದೇಶ ಪ್ರತಿ, ರೇಷನ್ ಕಾರ್ಡ್ ಗಳ ಇಂಚಿಂಚು ಮಾಹಿತಿ ಪಡೆದುಕೊಂಡರು. ಕರ್ನಾಟಕದವರಿಗೆ ಮಾತ್ರ ಮನೆ: ಕೋಗಿಲು ಲೇಔಟ್‌ನಲ್ಲಿ ಒತ್ತುವರಿ ತೆರವಾದ ಅಷ್ಟೂ ಕುಟುಂಬಗಳಿಗೆ ವಸತಿ ಭಾಗ್ಯ ಸಿಗಲ್ಲ, ಜಿಬಿಎ ಇಂದ 167 ಮನೆಗಳ ತೆರವು ಆಗಿ–ತ್ತು. ಆದರೆ ಈ ಸ್ಥಳದಲ್ಲಿ 200ಕ್ಕಿಂತ ಅಧಿಕ ಕುಟುಂಬಗಳು ಜಾಗ ಒತ್ತುವರಿ ಮಾಡಿವೆ. ಸದ್ಯ ಮಾನವೀಯತೆ ಆಧಾರದ ಮೇಲೆ ಮಾತ್ರ ಮನೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಹೀಗಾಗಿ ಸ್ಥಳೀಯರಿಗೆ ಮಾತ್ರ ಯೋಜನೆಯಡಿ ಮನೆ ಲಭ್ಯವಾಗಲಿದೆ. ಯಲಹಂಕ ವಿಧಾನಸಭಾ ಕ್ಷೇತ್ರದ ಕೋಗಿಲು ಲೇಔಟ್ ಹಾಗೂ ಫಕೀರ್ ಕಾಲೋನಿಯಲ್ಲಿ ನೂರಾರು ಮನೆಗಳನ್ನು ಧ್ವಂಸಗೊಳಿಸಿ ಮತ್ತೆ ಸರ್ಕಾರವೇ ಪರಿಹಾರ ಘೋಷಿಸಿದ ವಿಚಾರ ಇದೀಗ ಭಾರೀ ಚರ್ಚೆಗೆ ಕಾರಣವಾಗಿದೆ.

## ಜನವರಿ 1ರಿಂದ ಹೊಸದಾಗಿ ಜೆಸ್ಕಾಂ ಲೈನ್‌ಲಿಂಕ್ ಮಾರ್ಗ ಆರಂಭ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ–2 ಶಾಖೆ–3ರಲ್ಲಿ 110ಕೆವಿ ವಡವಟ್ಟಿ ಉಪ ಕೇಂದ್ರ ದಿಂದ ಹೊರ ಹೊಮ್ಮುವ ಡ್ಲೂ–10 ಮುನ್ನೂರುವಾಡಿಗೆ 110ಕೆವಿ ಜವಹಾರ ನಗರ ಉಪ ಕೇಂದ್ರ ದಿಂದ ಹೊಸದಾಗಿ ಲೈನ್‌ಲಿಂಕ್ ಅನ್ನು ನಿರ್ಮಿಸಲಾಗಿದೆ.**

ಜನವರಿ 1ರಿಂದ ಹೊಸದಾಗಿ ಲೈನ್‌ಲಿಂಕ್ ಮಾರ್ಗವು ಆರಂಭವಾಗುತ್ತಿದ್ದು, ಗ್ರಾಹಕರು ವಿದ್ಯುತ್ ಕಂಬಗಳಿಗೆ ದನ, ಕರು, ಕುರಿ ಹಾಗೂ ಮತ್ತಿತರ ಪ್ರಾಣಿಗಳನ್ನು ಕಟ್ಟುವುದು ವಿದ್ಯುತ್ ಕಂಬಗಳ ಬಳಿ ನಿಲ್ಲುವುದು ಮತ್ತಿತರ ಚಟುವಟಿಕೆಗಳನ್ನು ಮಾಡಬಾರದೆಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೇಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಪಟ್ಟಣದ ಬಂಗಾರ ಅಭರಣ ಮಾರಾಟಗಾರರಿಗೆ ಜಾಗೃತಿ ಮೂಡಿಸಿದ ಪೊಲೀಸ್ ಅಧಿಕಾರಿಗಳು

❑ ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಪಟ್ಟಣದಲ್ಲಿನ ವಿವಿಧ ಬಂಗಾರ ಹಾಗೂ ಬೆಳ್ಳಿಯ ಅಭರಣಗಳನ್ನು ತಯಾರಿಸುವವರ ಹಾಗೂ ಮಾರಾಟ ಮಳಿಗೆಗಳು,ಜ್ಯೂವೇಲ್ಲರಿ ಅಂಗಡಿಗಳಿಗೆ ಮಾನ್ವಿ ಪೊಲೀಸ್ ಠಾಣೆಯ ಎ.ಎಸ್.ಐ. ಶಿವಲಿಂಗಪ್ಪ ಭೇಟಿ ನೀಡಿ ಅಂಗಡಿ ಮಾಲಿಕರಿಗೆ ಸಾರ್ವಜನಿಕ ಸುರಕ್ಷತೆ ಅಧಿನಿಯಮ 2017 ಕಲಂ 6 (1) ಅಡಿಯಲ್ಲಿ ನೋಟಿಸ್ ನೀಡಿ ಮಾತನಾಡಿ ರಾಯಚೂರು ಜಿಲ್ಲಾ ಪೊಲಿಸ್ ಅಧೀಕ್ಷಕರು ಇತ್ತಿಚಿನ ದಿನಗಳಲ್ಲಿ ಜಿಲ್ಲೇಯಲ್ಲಿ ಅಭರಣ ಅಂಗಡಿಗಳಲ್ಲಿ ರಾಜಸ್ಥಾನ ಮತ್ತು ಉತ್ತರಪ್ರದೇಶದಿಂದ ಎರಡು ವಿಭಿನ್ನವಾದ ಕಳ್ಳರ ತಂಡಗಳು ಕಾರ್ಯಚಾರಿಸಿ ಅಭರಣ**



**ಅಂಗಡಿಗಳಲ್ಲಿ ಕಳ್ಳತನ ಮಾಡುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಕುರಿತು ನೀಡಿದ ಸೂಚನೆ.**

ನೀಡಿದ್ದು ಅದರಂತೆ ಮಾನ್ವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಂಗಾರದ ಅಭರಣಗಳ ಮಾರಾಟಗಾರರು ತಮ್ಮಲಿರುವ ಕೋಟ್ಯಾಂತರ ಬೆಲೆ ಬಾಳುವ ಬಂಗಾರ, ಬೆಳ್ಳಿ ಸೇರಿದಂತೆ ಅಮೂಲ್ಯವಾದ ಅಭರಣಗಳು ಕಳ್ಳತನವಾಗದಂತೆ ಅಗತ್ಯ ಜಾಗ್ರತೆ ವಹಿಸಬೇಕು ಅಂಗಡಿಗಳಲ್ಲಿ ಅಗತ್ಯವಾದ ಭದ್ರತ ವ್ಯವಸ್ಥೆ ಮಾಡಿಕೊಳ್ಳಬೇಕು ಬಂಗಾರ ಅಂಗಡಿಯ ಒಳಗಡೆ ಮತ್ತು ಹೊರಗಡೆ ಭದ್ರತೆಗಾಗಿ ಸಿ.ಸಿ. ಟಿವಿ .ಕ್ಯಾಮೆರಾಗಳನ್ನು ಆಳವಡಿಸಿಕೊಳ್ಳಬೇಕು, ಅಂಗಡಿಯ ಬಾಗಿಲುಗಳನ್ನು ಕಬ್ಬಿಣದಿಂದ ಗಟ್ಟಿ ಮುಟ್ಟಾಗಿ ಇರುವಂತೆ ಮಾಡಿಸಬೇಕು ಅಂಗಡಿಯನ್ನು ಬಂದ್ ಮಾಡಿಕೊಂಡು ಹೋಗುವಾಗ ಭಾರಿ ಬೆಲೆಬಾಳುವ ಆಭರಣಗಳನ್ನು ಅಂಗಡಿಗಳಲ್ಲಿ ಬಿಡದೆ ಅವುಗಳನ್ನು ತಮ್ಮ ಮನೆಗಳಿಗೆ? ತೆಗೆದುಕೊಂಡು ಹೋಗಬೇಕು, ತಮ್ಮ ಅಂಗಡಿಗಳ ಹೊರಗಡೆ ಹಾಗೂ ಒಳಗಡೆ ಅನುಮಾನಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅವರ ಕುರಿತು ಕೂಡಲೇ ಪೊಲೀಸ್ ಠಾಣೆಗೆ ಅಥಾವ ಪೊಲೀಸ್ ಸಹಾಯವಾಣಿ ವಾಹನ ಸಂಖ್ಯೆ 112 ಕ್ಕೆ ಕರೆಮಾಡಿ ಮಾಹಿತಿ ನೀಡಬೇಕು ಎಂದು ತಿಳಿಸಿದರು. ಮಾನ್ವಿ ಪೊಲೀಸ್ ಠಾಣೆ ವ್ಯಾಪ್ತಿಯ ವಿವಿಧ ಬಂಗಾರದ ಅಭರಣ ಮಳಿಗೆಗಳಿಗೆ ಭೇಟಿ ನೀಡಿ ಸುರಕ್ಷೇತೆಗಾಗಿ ನೋಟೀಸ್ ನೀಡಿ ಜಾಗೃತಿ ಮೂಡಿಸಿದರು. ಪೊಲೀಸ್ ಸಿಬ್ಬಂದಿಗಳಾದ ಬಸವರಾಜ, ಚರಣ–ರಾಜ, ರವಿಗೌಡ ಸೇರಿದಂತೆ ಇನ್ನಿತರರು ಇದ್ದರು.

## ಉಮ್ರಾ ಯಾತ್ರಾರ್ಥಿಗಳಿಗೆ ಸೋಮವಾರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ಸನ್ಮಾನಿಸಿ ಬೀಳ್ಕೊಟ್ಟರು

❑ ನೈಜ್ಯ ದೇಸೆ ನ್ಯೂಸ್





**ಸಿಂಧನೂರು: ಉಮ್ರಾ ಯಾತ್ರೆ ಕೈಗೊಂಡ ತಾಲ್ಲೂಕಿನ 70 ಯಾತ್ರಾರ್ಥಿಗಳಿಗೆ ಸೋಮವಾರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುಗೌಡ ಬಾದರ್ಲಿ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಸನ್ಮಾನಿಸಿ ಬೀಳ್ಕೊಟ್ಟರು.**

ನಂತರ ಬಾಬುಗೌಡ ಬಾದರ್ಲಿ ಮಾತನಾಡಿ, ಧಾರ್ಮಿಕ ಪುಣ್ಯಕ್ಷೇತ್ರಗಳ ದರ್ಶನದಿಂದ ಮಾನಸಿಕ ನೆಮ್ಮದಿ ದೊರೆಯುವುದರ ಜೊತೆಗೆ ಶಾಂತಿ, ಸಾಮರಸ್ಯದ ಭಾವನೆ ಮೂಡುತ್ತದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಕೆಡಿಪಿ ಸದಸ್ಯ ಶಫೀವುಲ್ಲಾಖಾನ್, ಕಾಂಗ್ರೆಸ್ ಮುಖಂಡರಾದ ರಾಜುಗೌಡ ಬಾದರ್ಲಿ, ಎಂ.ಲಿಂಗಪ್ಪ ದಢೇಸೂಗುರು, ಎನ್. ಅಮರೇಶ, ಖಾಜಿಮಲಿಕ್ ವಕೀಲ, ಸೈಯದ್ ಹಾರೂನ್‌ಪಾಷಾ ಜಾಹಗೀರ್‌ದಾರ್, ಶಬ್ಬೀರ್ ಅಹ್ಮದ್ ನಾಯಕ ಸೇರಿದಂತೆ ಉಮ್ರಾ ಯಾತ್ರಾರ್ಥಿಗಳು ಇದ್ದರು.


ನಂತರ ಮೌಲಾನಾ ಅಜರುದ್ದೀನ್ ರಬ್ಬನಾ ನೇತೃತ್ವದಲ್ಲಿ ಸಿಂಧನೂರು ತಾಲ್ಲೂಕಿನ 70 ಜನರು ಉಮ್ರಾ ಪ್ರವಾಸ ಕೈಗೊಂಡರು.

## ನವೆಂಬರ್ 2026 ವಿಧಾನ ಪರಿಷತ್ ಚುನಾವಣೆ ಕಾಂಗ್ರೆಸ್ ಪಕ್ಷದ ಈಶಾನ್ಯ ಶಿಕ್ಷಕರ ಮತಕ್ಷೇತ್ರದ ಅಭ್ಯರ್ಥಿ ಶರಣಪ್ಪ ಮಟ್ಟೂರು

❑ ನೈಜ್ಯ ದೇಸೆ ನ್ಯೂಸ್

**ಬೆಂಗಳೂರು: ನವೆಂಬರ್ 2026: ಕರ್ನಾಟಕ ವಿಧಾನ ಪರಿಷತ್‌ನ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಗಾಗಿ ನವೆಂಬರ್ 2026ರಲ್ಲಿ ನಡೆಯಲಿರುವ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಕಾಂಗ್ರೆಸ್ ಪಕ್ಷವು ಅಂತಿಮಗೊಳಿಸಿದೆ.**

ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರ ಅನುಮೋದನೆಯೊಂದಿಗೆ, ಈಶಾನ್ಯ ಶಿಕ್ಷಕರ ಮತಕ್ಷೇತ್ರಕ್ಕೆ ಶರಣಪ್ಪ ಮಟ್ಟೂರು ಅವರನ್ನು ಕಾಂಗ್ರೆಸ್ ಪಕ್ಷದ ಅಧಿಕೃತ



ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿದೆ.

ಇದರ ಜೊತೆಗೆ, ಪಶ್ಚಿಮ ಪದವೀಧರರ ಕ್ಷೇತ್ರಕ್ಕೆ ಶ್ರೀ ಮೋಹನ್ ಲಿಂಬಿಕಾಯಿ ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ಶ್ರೀ ಶಶಿ ಹುಲಿಕುಂಟೆಮಠ್ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಶ್ರೀ ಪುಟ್ಟಣ್ಣ ಇವರನ್ನು ಎಸಿಸಿ ಅಧ್ಯಕ್ಷರ ಆದೇಶದ ಮೇರೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಆದೇಶಿಸಿದ್ದಾರೆ ಕಾಂಗ್ರೆಸ್ ಪಕ್ಷವು ಈ ಅಭ್ಯರ್ಥಿಗಳ ಮೂಲಕ 2026ರ ವಿಧಾನ ಪರಿಷತ್ ಚುನಾವಣೆಯಲ್ಲಿ ಬಲವಾದ ಹೋರಾಟ ನಡೆಸುವ ನಿರೀಕ್ಷೆ ಇದೆ.

## ಅಬಕಾರಿ ಇಲಾಖೆಯಿಂದ ಸಿಹೆಚ್ ಪೌಡರ್, ಕಲಬೆರೆಕೆ ಸೇಂದಿ ದುಷ್ಪರಿಣಾಮದ ಅರಿವು ಕಾರ್ಯಕ್ರಮ

❑ ನೈಜ್ಯ ದೇಸೆ ನ್ಯೂಸ್

**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಜಿಲ್ಲಾಡಳಿತ, ಅಬಕಾರಿ ಇಲಾಖೆ, ಪೊಲೀಸ್ ಇಲಾಖೆ ಮತ್ತು ಜಿಲ್ಲಾ ಆರೋಗ್ಯ ಇಲಾಖೆಯಿಂದ ನಗರದ ಯಕ್ಲಸ್‌ಪೂರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಿಸೆಂಬರ್ 29ರಂದು ಸಿಹೆಚ್ ಪೌಡರ್, ಕಲಬೆರೆಕೆ ಸೇಂದಿ ಸೇವನೆಯಿಂದಾಗುವ ದುಷ್ಪರಿಣಾಮಗಳ ಕು–ರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.**



ಈ ವೇಳೆ ಮನೋರೋಗ ತಜ್ಞರಾದ ಡಾ.ಮನೋಹರ್ ಪತ್ತಾರ ಅವರು ಮಾತನಾಡಿ, ಸೇಂದಿ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯನ ದೇಹದ ಮೇಲೆ ದುಷ್ಪ–ರಿಣಾಮಗಳಾಗಲಿವೆ. ತಲೆನೋವು, ನಿದ್ರಾಹೀನತೆ, ವಾಕರಿಕೆ, ನರದೌರ್ಬಲ್ಯ, ಅಸಹಜ ಹೃದಯ ಲಯಗಳ ಮತ್ತು ಆಂತರಿಕ ರಕ್ತಸ್ರಾವ ಹಾಗೂ ಕ್ಯಾನ್ಸರ್ ಮುಂತಾದ ಆರೋಗ್ಯ ಸಮಸ್ಯೆಗಳು ಹಾಗೂ ಚಿತ್ತಚೆಂಚಲತೆ, ಜ್ಞಾಪಕ ಶಕ್ತಿ ಕ್ಷಿಣಿಸುವುದು, ಖಿನ್ನತೆ ಹಾಗೂ ಅತ್ಮಹತ್ಯೆಯ ಆಲೋಚನೆಗಳು ಮುಂತಾದ ಮಾನಸಿಕ ಕಾಯಿಲೆಗಳು ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುತ್ತವೆ ಎಂದರು. ಮಾದಕ ವಸ್ತುಗಳ ಸೇವನೆಯಿಂದ ಯುವಜನತೆಗೆ ದೂರ ಇರುವಂತೆಯು ಹಾಗೂ ಚಟಗಳಿಗೆ ಬಲಿಯಾದ ವ್ಯಕ್ತಿಗಳಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣಪಡಿಸುವ ಅವಕಾಶಗಳಿದ್ದು, ಡಿ–ಅಡಿಕ್ಷನ್ ಸೆಂಟರ್‌ಗಳಲ್ಲಿ ಮಾದಕ ವಸ್ತು ವ್ಯಸನಿಗಳಿಗೆ ಚಿಕಿತ್ಸೆ ನೀಡಲಾಗುವುದು ಎಂದರು.

ಈ ವೇಳೆ ರಿಮ್ಸ್ ಆಸ್ಪತ್ರೆಯ ಮಾನಸಿಕ ಆರೋಗ್ಯ ತಜ್ಞರಾದ ಡಾ.ರಮೇಶ ಬಾಬು ಅವರು ಮಾತನಾಡಿ, ಸೇಂದಿಯ ಬಗ್ಗೆ ಇರುವ ಮೌಢ್ಯತೆಯಿಂದ ನಾವು ಹೊರ ಬರಬೇಕು ಎಂದರು. ಈ ವೇಳೆ ಗ್ರಾಮೀಣ ಠಾಣೆಯ ಆರಕ್ಷಕರಾದ ಸಾಬಯ್ಯ ಅವರು ಮಾತನಾಡಿ, ಸೇಂದಿ ಸೇವನೆಯಿಂದ ಸಮಾಜದಲ್ಲಿ ಅಶಾಂತಿ ಮೂಡುತ್ತಿದೆ. ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯ ಹಾಳು ಮಾಡುತ್ತಿರುವ ಸೇಂದಿ ಮತ್ತು ಮುಂತಾದ ಮಾದಕ ವಸ್ತುಗಳ ಉತ್ಪಾದನೆ, ತಯಾರಿಸುವಿಕೆ, ಕಳ್ಳಸಾಗಾಣೆ ಮತ್ತು ಮಾರಾಟ ಮುಂತಾದ ಕಾನೂನು ಬಾಹಿರ ಚಟುವಟಿಕೆಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಪೋಲಿಸ್ ಇಲಾಖೆ, ಅಬಕಾರಿ ಇಲಾಖೆ, ಎನ್.ಸಿ.ಬಿ ಹಾಗೂ ರಾಜ್ಯ ಮತ್ತು ಕೇಂದ್ರ ಸರಕಾರಗಳು ನೇಮಿಸಿರುವಂತಹ ಏಜೆನ್ಸಿಗಳು ಕಾರ್ಯ ಪ್ರವೃತ್ತವಾಗಿವೆ.

ಇತ್ತಿಚಿನ ದಿನಗಳಲ್ಲಿ ರಾಯಚೂರು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸೇಂದಿ ಮಾರಾಟಕ್ಕೆ ಸಂಬಂಧಪಟ್ಟಂತ ಪ್ರಕರಣಗಳನ್ನು ಪತ್ತೆ ಹಚ್ಚಿ ಆರೋಪಿತರನ್ನು ಬಂಧಿಸಿ ಕ್ರಮ ಜರುಗಿಸಲಾಗಿದೆ. ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದಲ್ಲಿ ಏನೆಲ್ಲಾ ಶಿಕ್ಷೆ, ದಂಢನೆಗಳಿವೆ ಎಂದು ಸಹವಿವರವಾಗಿ ಕಾನೂನಿನ ಅರಿವು ಮೂಡಿಸಿದರು. ಅಲ್ಲದೆ ಸೇಂದಿ ಹಾಗೂ ಮಾದಕ ವಸ್ತು ಸಂಬಂಧಿ ಅಪರಾಧಗಳು ಕಂಡು ಬಂದ ಪಕ್ಷದಲ್ಲಿ ಪೋಲಿಸ್ ಮತ್ತು ಅಬಕಾರಿ ಇಲಾಖೆಗೆ ಮಾಹಿತಿಯನ್ನು ನೀಡಿ ಅಪರಾಧಗಳನ್ನು ತಡೆಯುವಲ್ಲಿ ಸಹಕರಿಸುವಂತೆ ಕೋರಿದರು. ಈ ವೇಳೆ ಅಬಕಾರಿ ನಿರೀಕ್ಷಕರಾದ ಸರಸ್ವತಿ ಅವರು ಮಾತನಾಡಿ, ಹವ್ಯಾಸಗಳು ಯುವ ಜನತೆಗೆ ಬದುಕನ್ನು ಕಟ್ಟಿಕೊಡುತ್ತವೆ. ಮತ್ತು ಚಟಗಳು ಬದುಕನ್ನು ಕೆಡಿಸುತ್ತವೆ.

ಆದುದ್ದರಿಂದ ಇಂದಿನ ಯುವ ಜನತೆ ಸಂಗೀತ, ಸಾಹಿತ್ಯ ರಚನೆ, ಕ್ರೀಡೆ ಮುಂತಾದ ಒಳ್ಳೆ ಹವ್ಯಾಸಗಳನ್ನು ಬೆಳೆಸಿಕೊಂಡು ಒಳ್ಳೆಯ ರೀತಿಯ ಸಾಧನೆ ಮಾಡಿ ಬದುಕು ರೂಪಿಸಿಕೊಳ್ಳಬೇಕು. ಮತ್ತು ಕುಟುಂಬಕ್ಕೆ ಹಾಗೂ ಸಮಾಜಕ್ಕೆ ಆಸ್ತಿಯಾಗಿ ಬೆಳೆಯಬೇಕು ಎಂದರು. ಮಾನಸಿಕ ಆರೋಗ್ಯ ಮತ್ತು ದೈಹಿಕ ಆರೋಗ್ಯವನ್ನು ಹಾಳು ಮಾಡುವ ಕೆಟ್ಟ ಚಟಗಳ ಹಿಂದೆ ಬಿದ್ದು ಸುಂದರ ಭವಿಷ್ಯವನ್ನು ಹಾಳುಮಾಡಿಕೊಂಡು ಕುಟುಂಬ ಸಮಾಜಕ್ಕೆ ಹೊರೆಯಾಗಬಾರದು ಎಂದು ಯುವಕರಿಗೆ ಕಿವಿಮಾತು ಹೇಳಿದರು. ಇದೇ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ತಿಮ್ಮಪ್ಪ ನಾಯಕ, ಎಸ್.ಡಿ.ಎಮ್.ಸಿ ಉಪಾಧ್ಯಕ್ಷರಾದ ರಾಜಶೇಖರ ಯಕ್ಲಾಸ್‌ಪೂರ, ಅಬಕಾರಿ ಇಲಾಖೆಯ ಅಬಕಾರಿ ನಿರೀಕ್ಷಕರಾದ ಸತ್ಯನಾರಾಯಣ, ಅಬಕಾರಿ ಉಪ ನಿರೀಕ್ಷಕರಾದ ಯಲ್ಲನಾರಿಲು, ಮಹ್ಮದ್ ಹುಸೇನ್, ಅಮೃತ ಬಿಂದು ಸಿಬ್ಬಂದಿಗಳಾದ ಚಂದ್ರಕಾಂತ್, ಶಿವಾನಂದ, ತಿರುಪತಿ, ಯಂಕೋಬ ಸೇರಿದಂತೆ ಇತರರು ಇದ್ದರು.

## ಸಾಹಿತ್ಯ ಸಿಂಚನ

2025 ಧನ್ಯವಾದದ ವಿದಾಯ

2025 ನಿನಗೆ ಧನ್ಯವಾದದ ವಿದಾಯ
ಮರೆಯಲಾರೆ ನೀ ಕಲಿಸಿದ ಪಾಠಗಳ
ಹೃದಯದಿ ಅಚ್ಚೊತ್ತಿದೆ ಸಿಹಿ ಸಮಯ
ನೆನಪಿನ ಪುಟ ಸೇರಿವೆ ಕಹಿ ಕ್ಷಣಗಳು.!!

ಬಾಳಲಿ ನೋವು ನಲಿವುಗಳು ಸಮಪಾಲು
ಈ ವರ್ಷ ನಲಿವುಗಳ ಅಬ್ಬರವೇ ಅತಿಹೆಚ್ಚು
ಕಾಯುವ ಭಗವಂತನ ಕೃಪೆ ನನ್ನ ಜೊತೆಗಿರಲು
ಕಷ್ಟದ ಕ್ಷಣಗಳು ನನ್ನ ಬಲಿಷ್ಠಗೊಳಿಸಿದ್ದೆ ಹೆಚ್ಚು.!!

ತಿಳಿಸಿದೆ ನೀನು ನಮಗೆ ಸಮಯದ ಮಹತ್ವ
ಸಹಿಸಲಿಲ್ಲ ನಮ್ಮ ಖುಷಿಯನ್ನು ಬಂಧುಗಳು
ಹೇಳಿ ಹೊರಟೆ ನಮ್ಮವರು ಯಾರೆಂಬ ತತ್ವ
ಛಲ ಬಿಡದೆ ಇಮ್ಮಡಿಗೊಂಡಿವೆ ಕನಸುಗಳು.!!

2025 ಮತ್ತೊಮ್ಮೆ ಹೃದಯದಿ ಧನ್ಯವಾದ
ಬರುವ ವರ್ಷದ ದಿನಗಳಲ್ಲಿ ನಂಬಿಕೆಯಿದೆ
ಇರುತ್ತದೆ ತಾಯಿ ಜಗನ್ಮಾತೆಯ ಆಶೀರ್ವಾದ
ಮನ ಮುಗುಳ್ನಗೆಯ ವಿದಾಯ ಕೋರಿದೆ..!!

ಶ್ರೀಮತಿ ಕವಿತಾ ಹಿರೇಮಠ ಕವಿತಾಳ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಶಂಕ್ರಪ್ಪ ಯಡವಲ್ ನೆನಪಿನಲ್ಲಿ ಸೇವಾ ಕಾರ್ಯ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಡಿ 30 ಪಟ್ಟಣದಲ್ಲಿ ಇಂದು ದಿವಂಗತ ಶಂಕ್ರಪ್ಪ ಯಡವಲ್ ನೊಲಕೊಳ ಅವರ ಮೊದಲನೇ ಪುಣ್ಯತಿಥಿಯ ಅಂಗವಾಗಿ ಶಿವಶಂಕ್ರಪ್ಪ ನೆಲಕೊಳ ಸೇವಾ ಸಂಸ್ಥೆ (ರಿ) ವತಿಯಿಂದ ಸಮಾಜಮುಖಿ ಸೇವಾ ಕಾರ್ಯಕ್ರಮಗಳು ನಡೆಯುವ ಮೂಲಕ ಸಾರ್ಥಕತೆ ಪಡೆದವು.**

ಈ ಸಂದರ್ಭದಲ್ಲಿ ಪಟ್ಟಣದ ನವ ಚೇತನ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ರೋಗಿಗಳಿಗೆ ಊಟ ಮತ್ತು ಹಣ್ಣು?ಹಂಪಲುಗಳನ್ನು ವಿತ-ರಿಸಲಾಯಿತು. ದಾನ?ಸೇವೆ ಮೂಲಕ ಪುಣ್ಯತಿಥಿ-ಯನ್ನು ಆಚರಿಸುವುದು ಶಂಕ್ರಪ್ಪ ಯಡವಲ್ ಬದುಕಿನ ಮೌಲ್ಯಗಳಿಗೆ ಸಲ್ಲಿಸಿದ ಗೌರವವಾಗಿದ್ದು, ಮಾನವೀಯತೆಯ ಸಂದೇಶ ನೀಡಿತು.



ಕಾರ್ಯಕ್ರಮದಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಹುಸೇನಪ್ಪ ಯಡವಲ್ಲಿ ಅವರು, "ಮುಂದಿನ ವರ್ಷ ಶಿವಶಂಕ್ರಪ್ಪ ನೆಲಕೊಳ ಸೇವಾ ಸಂಸ್ಥೆ ವತಿಯಿಂದ 'ರುದ್ರಾಶ್ರಮ'ವನ್ನು ಪ್ರಾರಂಭಿಸುವ ಉದ್ದೇಶ ಹೊಂದಿದ್ದೇವೆ. ಇದಕ್ಕಾಗಿ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ. ಸಮಾಜದ ಎಲ್ಲ ವರ್ಗಗಳ ಸಹಭಾಗಿತ್ವದಿಂದ ಆಶ್ರಮವನ್ನು ಯಶಸ್ವಿಯಾಗಿ ಆರಂಭಿಸುವ ಸಂಕಲ್ಪವಿದೆ" ಎಂದು ಹೇಳಿದರು. ಸಂಸ್ಥೆಯ ಕಾರ್ಯದರ್ಶಿ ಚಂದ್ರಶೇಖರ್ ಯಡವಲ್ಲಿ ಅವರು ಸೇವಾ ಚಟುವಟಿಕೆಗಳ ಬಗ್ಗೆ ವಿವರಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಸಮಾಜೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಈ ಕಾರ್ಯಕ್ರಮದಲ್ಲಿ ನವ ಚೇತನ ಶಾಲೆಯ ಮುಖ್ಯಸ್ಥರಾದ ಆನಂದ ಪ್ರಸಾದ್ ಫಾದರ್, ಸೇವಾಶ್ರಮದ ಸಿಸ್ಟರ್ ಲೂಸಿಯಾ ಮೇಡಂ ಹಾಗೂ ಲೀಡಿಯ ಮೇಡಂ, ವೈದ್ಯಾಧಿಕಾ-ರಿಗಳಾದ ಡಾ. ಪ್ರವೀಣ್ ಕುಮಾರ್ ಮತ್ತು ಮಹಾಂತೇಶ ಸಂಕಲ್ ಸೇರಿದಂತೆ ಗಬ್ಬೂರು, ಹುಲುಗಪ್ಪ ಯಕ್ಲಾಸ್ಪೂರು, ಯಮೂನಪ್ಪ ಕವಿತಾಳ, ರಮೇಶ್ ಯಾದವ, ಪ್ರಕಾಶ ಯಡವಲ್ಲಿ ಅವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು, ಆಸ್ಪತ್ರೆಯ ರೋಗಿಗಳು ಹಾಗೂ ಪತ್ರಿಕಾಮಾಧ್ಯಮದ ಮಿತ್ರರ ಸಾನ್ನಿಧ್ಯದಲ್ಲಿ ನಡೆದ ಈ ಸೇವಾ ಕಾರ್ಯವು ಪುಣ್ಯತಿಥಿ-ಯನ್ನು ಮಾನವೀಯ ಸ್ಪರ್ಶದೊಂದಿಗೆ ಆಚ-'ರಿಸಿದ ಉದಾಹರಣೆಯಾಗಿ ಉಳಿಯಿತು.

# ರಾಜ್ಯದ ಪೋಲಿಸ್ ಇಲಾಖೆಗೆ ಆದರ್ಶವಾಗಿದ್ದ ಮಧುಕರ್ ಶೆಟ್ಟಿ ಪುಣ್ಯತಿಥಿ ಆಚರಣೆ




ನೈಜ್ಯ ದೆಸೆ ನ್ಯೂಸ್

**ಕವಿತಾಳ: ಡಿ 30 ದಕ್ಷ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿ ಮಧುಕರ್ ಶೆಟ್ಟಿ ಅವರ ಪುಣ್ಯತಿಥಿ ಕವಿತಾಳ ಪೋಲಿಸ್ ಠಾಣೆಯಲ್ಲಿ ಆಚರಿಸಲಾಗಿದೆ. ಅನಾರೋಗ್ಯದಿಂದ ಹಠಾತ್ ನಿಧನರಾದ ಅವರು ತಮ್ಮ ಕರ್ತವ್ಯವನ್ನು ಅತ್ಯುತ್ತಮ ದಕ್ಷತೆ, ಶಿಸ್ತಿನೊಡಿ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸಿದ್ದ ರಾಜ್ಯದ ಹೆಮ್ಮೆಯ ಪೊಲೀಸ್ ಅಧಿಕಾರಿಯಾಗಿದ್ದರು.**

ಅತ್ಯುತ್ತಮ ವಿದ್ಯಾಭ್ಯಾಸ ಪಡೆದ ಹಾಗೂ ಜನರ ಕಲ್ಯಾಣದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಕೇವಲ ಪೊಲೀಸ್ ಇಲಾಖೆಗೆ ಮಾತ್ರವಲ್ಲ, ರಾಜ್ಯದ ಜನ-ರಿಗೆ ಆದರ್ಶವಾಗಿದ್ದರು. ಆದರೆ ಇತ್ತೀಚೆಗೆ ರಾಜ್ಯದ ಅನೇಕ ಕಡೆ ಪೊಲೀಸ್ ಇಲಾಖೆಯ ಮೇಲೆ ಸಾರ್ವಜನಿಕರ ನಕಾರಾತ್ಮಕ ಅಭಿಪ್ರಾಯ ಮೂಡುತ್ತಿರುವುದು ವಿಶೇಷವಾಗಿ ಚಿಂತಾಜನಕವಾಗಿದೆ. ಇಲಾಖೆಯೊಳಗಿನ ಭ್ರಷ್ಟಾಚಾರ, ಕೆಲವು ಅಧಿಕಾರಿಗಳ ಅಪರಾಧ ಕೃತ್ಯಗಳಲ್ಲಿ ತೊಡಗಿರುವುದು, ಅಮಾನತು ಅಥವಾ ಜೈಲುಪಾಲಾಗಿರುವ ಘಟನೆಗಳು ಮಾಧ್ಯಮಗಳಲ್ಲಿ ಹೆಚ್ಚಾಗಿ ವರದಿಯಾಗುತ್ತಿವೆ.

ಈ ಹಿನ್ನೆಲೆಯಲ್ಲಿ, ಇಂದಿನ ಪೊಲೀಸ್ ಸಿಬ್ಬಂದಿಗೆ ಮಧುಕರ್ ಶೆಟ್ಟಿಯವರ ಆದ-'ರ್ಶ, ಶುದ್ಧಚರಿತ್ರೆ ಮತ್ತು ಕರ್ತವ್ಯಬದ್ಧತೆಯನ್ನು ನೆನಪಿಸುವುದು ಅಗತ್ಯ ಎಂದು ರಾಜ್ಯದ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡು ಲಂಚಮುಕ್ತ, ಭ್ರಷ್ಟಾಚಾರಮುಕ್ತ ಸಮಾಜ ನಿರ್ಮಾಣಕ್ಕಾಗಿ ಕಾರ್ಯನಿರತ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ ಸೂಚಿಸಿದೆ. ಪಕ್ಷದ ನೇತೃತ್ವದಲ್ಲಿ ಮಧುಕರ್ ಶೆಟ್ಟಿಯ ಭಾವಚಿತ್ರವನ್ನು ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ವಿತರಿಸಿ, ಪೊಲೀಸ್ ಸಿಬ್ಬಂದಿಗೆ ಆದರ್ಶವಾಗಿ ಉಳಿಯುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಬಸವರಾಜ ರನ್ನರ್, ಸುರೇಶ, ಹನುಮೇಶ, ಸಂತೋಷ ಕಲಶೆಟ್ಟಿ ಸೇರಿದಂತೆ ಪದಾಧಿಕಾರಿಗಳು ಇದ್ದರು.

## ಜನವರಿ 3ರಂದು ಜಿಲ್ಲಾಡಳಿತದಿಂದ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಇಲ್ಲಿಯ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 2026ರ ಜನವರಿ 3ರ ಬೆಳಿಗ್ಗೆ 11 ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.**

ದೇವದುರ್ಗದ ಮೂಲ ಪೀಠದ ವಿಶ್ವಕರ್ಮ ಶ್ರೀಮದ್ ಮದಾನೆಗುಂದಿ ಸರಸ್ವತಿ ಸಂಸ್ಥಾನದ ಶ್ರೀಶ್ರೀ ಮೌನೇಶ್ವರ ಮಹಾಸ್ವಾಮಿಗಳು ದಿವ್ಯಾ ಸಾನಿಧ್ಯ ವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು. ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್. ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾ-ರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಎಸ್.ಆರ್.ಕೆ. ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಪಕರಾದ ಡಾ.ಸವಿತಾ ಪಂಪಾಪತಿ ಬಡಿಗೇರ್ ಅವರು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಕುರಿತು ಉಪನ್ಯಾಸ ನೀಡುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ್ಯೋತಿ ಪ್ರಕರಣ-ಹುಬ್ಬಳ್ಳಿ ಮರ್ಯಾದೆ ಹತ್ಯೆ: ದಸಂಸ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಡಿ 30 ಲಿಂಗಸುಗೂರು ತಾಲೂಕಿನ ಹಟ್ಟಿ ಚಿನ್ನದ ಗಣಿ ವ್ಯಾಪ್ತಿಯಲ್ಲಿ ನಡೆದ ಸ್ಟಾಫ್ ನರ್ಸ್ ಕುಮಾರಿ ಜ್ಯೋತಿ ಅವರ ಅನುಮಾನಾಸ್ಪದ ಸಾವನ್ನು ಕೊಲೆ ಪ್ರಕರಣವಾಗಿ ಪರಿಗಣಿಸಿ ನಿಜವಾದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಹಾಗೂ ಹುಬ್ಬಳ್ಳಿಯಲ್ಲಿ ನಡೆದ ಮರ್ಯಾದೆ ಹತ್ಯೆ ಪ್ರಕರಣದಲ್ಲಿ ದೋಷಿಗಳಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ದಲಿತ ಸಂರಕ್ಷ ಸಮಿತಿ ಪ್ರತಿಭಟನೆ ನಡೆಸಿತು.**

ಪ್ರತಿಭಟನೆಯಲ್ಲಿ ಮಾತನಾಡಿದ ನಾಯಕರು, ಜ್ಯೋತಿ ಅವರ ಸಾವು ಆತ್ಮಹತ್ಯೆಯಲ್ಲ, ಜಾತಿ ದ್ವೇಷದಿಂದ ನಡೆದ ಹತ್ಯೆಯೇ ಎಂಬ ಗಂಭೀರ ಅನುಮಾನಗಳು ಇದ್ದು, ಈ ಪ್ರಕರಣವನ್ನು ಎಸ್ಸಿ/ಎಸ್ಟಿ (ಅತ್ಯಾಚಾರ ತಡೆ) ಕಾಯ್ದೆಯಡಿ ದಾಖಲಿಸಿ ವೇಗದ ತನಿಖೆ ನಡೆಸಬೇಕೆಂದು



ಆಗ್ರಹಿಸಿದರು. ಜ್ಯೋತಿ ಅವರ ಕುಟುಂಬಕ್ಕೆ ಸರ್ಕಾರದಿಂದ ಯೋಗ್ಯ ಪರಿಹಾರ ಹಾಗೂ ಭದ್ರತೆ ನೀಡಬೇಕೆಂದೂ ಮನವಿ ಮಾಡಿದರು. ಇದೇ ವೇಳೆ, ಅನ್ಯಜಾತಿ ವಿವಾಹದ ಕಾರಣ-ಕ್ಕೆ 7 ತಿಂಗಳ ಗರ್ಭಿಣಿಯಾಗಿದ್ದ ದಲಿತ ಮಹಿಳೆಯನ್ನು ಕೊಲೆಗೈದ ಹುಬ್ಬಳ್ಳಿ ಮರ್ಯಾದೆ ಹತ್ಯೆ ಪ್ರಕರಣವನ್ನು ಮಾನವೀಯತೆಗೆ ವಿರೋಧವಾದ ಅಮಾನುಷ ಕೃತ್ಯವೆಂದು ಪ್ರತಿಭಟನಾಕಾರರು ಖಂಡಿಸಿದರು. ಇಂತಹ ಜಾತಿ ಆಧಾರಿತ ಹತ್ಯೆಗಳು ಮರುಕಳಿಸದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ಬಳಿಕ ದಲಿತ ಸಂಘರ್ಷ ಸಮಿತಿ ವತಿಯಿಂದ ಜಿಲ್ಲಾಡಳಿತಕ್ಕೆ ಮನವಿ ಪತ್ರ ಸಲ್ಲಿಸಿ, ಎರಡೂ ಪ್ರಕರಣಗಳಲ್ಲಿ ನಿಷ್ಪಕ್ಷಪಾತ ತನಿಖೆ, ಆರೋಪಿಗಳ ತಕ್ಷಣದ ಬಂಧನ ಹಾಗೂ ದೋಷಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಲಾಯಿತು. ಕಂದಾಯ ಇಲಾಖೆಯ ಅಧಿಕಾರಿ ವಿಜಯಲಕ್ಷ್ಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಹುಚ್ಚಪ್ಪ ಬುಳ್ಳಾಪುರು, ಬಾಲಸ್ವಾಮಿ ಜಿನಾಪುರು, ಈರಪ್ಪ ಕೆಳಗೇರಿ, ಅರಳಪ್ಪ ತೂಪ್ಪದೂರು, ಹೆಚ್ ಬಸವರಾಜು, ಹುಲಗಪ್ಪ ಯಕ್ಲಾಸ್ ಪುರು, ನಿಂಗಪ್ಪ ತೋಳದ್, ಹುಚ್ಚಪ್ಪ ವಡವಟ್ಟಿ, ಚಂದಪ್ಪ ಹೆಸರೂರು, ಯಾಕೋಬ ಕಡತಲ್, ಮೌನೇಶ ಕೊಡ್ಲಿ, ಫಕಿರಪ್ಪ, ರಮೇಶ ಇರಬಗೇರ, ಬಸವರಾಜ ಕೆಲಗೇರ, ದೇವರಾಜ ಮ್ಯಾಗಳಮನಿ, ಶುಭಾಶ ಕೆಳಗೇರ, ರಸೂಲ ದಿದ್ದಗಿ, ಹನುಮಂತ ಬುಳ್ಳಾಪುರು , ಸಂತೋಷ ಕಲಶೆಟ್ಟಿ, ಹನುಮೇಶ ಭೋವಿ, ಮೈಬೂ ಅರಕೆರಿ, ಮೌನೇಶ ಚಲುವಾದಿ, ರಫಿ ಒಂಟಿಬಂಡಿ, ಹನುಮಂತ ಬುಳ್ಳಾಪುರು, ಸೇರಿದಂತೆ ಪೋಲಿಸ್ ಇಲಾಖೆ ಬಂದೋಬಸ್ ಒದಗಿಸಿತ್ತು.

# ಕಳಪೆ ಬೀಜ ವಿತರಣೆ ಆರೋಪ ರೈತರ ಭಾರಿ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಕಾರಟಗಿ: ಡಿ 30 ತಾಲೂಕಿನ ಮೈಲಾಪುರ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಬಳಿ ಇಂದು ರೈತರು ಸೇರಿ ಕಳಪೆ ಬೀಜ ವಿತರಣೆ ಖಂಡಿಸಿ ಭಾರಿ ಪ್ರತಿಭಟನೆ ನಡೆಸಿದರು. ಬೂದುಗುಂಪ ಗ್ರಾಮದ ಶ್ರೀ ವೀರಭದ್ರೇಶ್ವರ ಟೇಡರ್ಸ್ ಸಂಸ್ಥೆಯಿಂದ ಕಳಪೆ ಬೀಜಗಳನ್ನು ವಿತರಿಸಲಾಗಿದೆ ಎಂದು ರೈತ ಮುಖಂಡ ಶಿವಕುಮಾರ್ ಬನ್ನೂರು (ಮೈಲಾಪುರ) ಗಂಭೀರ ಆರೋಪ ಮಾಡಿದರು.**

ಈ ಕಳಪೆ ಬೀಜ ಬಳಕೆಯಿಂದ ಮೈಲಾಪುರ ಹಾಗೂ ಸುತ್ತಮುತ್ತಲ ಗ್ರಾಮಗಳ ರೈತರಿಗೆ ಒಟ್ಟು ಸುಮಾರು ಒಂಬತ್ತು ಕೋಟಿ ರೂಪಾಯಿ ನಷ್ಟ ಉಂಟಾಗಿದೆ ಎಂದು ಅವರು




ಆಕ್ರೋಶ ವ್ಯಕ್ತಪಡಿಸಿದರು. ಈಗಾಗಲೇ ರೈತಾಪಿ ಜೀವನವು ಅನೇಕ ಸಮಸ್ಯೆಗಳ ಮಧ್ಯೆ ಕಷ್ಟಕರವಾಗಿ ಸಾಗುತ್ತಿರುವ ಸಂದರ್ಭದಲ್ಲಿ, ಈ ರೀತಿಯ ವಂಚನೆ ರೈತರಿಗೆ ಮಾಡಿರುವುದು ಅತಿ ದೊಡ್ಡ



ಮೋಸವಾಗಿದೆ ಎಂದು ಅವರು ಹೇಳಿದರು. ಈ ಪ್ರಕರಣದ ಕುರಿತು ಸರ್ಕಾರ ಕೂಡಲೇ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ನಷ್ಟ ಅನುಭವಿಸಿದ ರೈತರಿಗೆ ನ್ಯಾಯಯುತ ಪರಿಹಾರ ಒದಗಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಲಾಪುರ ಗ್ರಾಮದ ಹೆಚ್ಚಿನ ಸಂಖ್ಯೆಯ ರೈತರು ಭಾಗವಹಿಸಿ, ಕಳಪೆ ಬೀಜ ವಿತರಣೆ ವಿರುದ್ಧ ತೀವ್ರ ಖಂಡನೆ ವ್ಯಕ್ತಪಡಿಸಿದರು. ರೈತರ ಪರವಾಗಿ ನ್ಯಾಯ ದೊರಕುವವರೆಗೆ ಹೋರಾಟ ಮುಂದುವ-ರಿಸುವ ಎಚ್ಚರಿಕೆಯನ್ನು ಅವರು ನೀಡಿದರು. ಈ ಪ್ರತಿಭಟನೆಯಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಬಸವ ರೆಡ್ಡಪ್ಪ ಗೂಡೂರು ಉಪಾಧ್ಯಕ್ಷ ಸೋಮನಾಳ ಹಿರೇಮಠ ಗುರುಗಳು ಕಾರ್ಯದರ್ಶಿಗಳಾದ ಶಿವಕುಮಾರ್ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಚನ್ನಬಸವ ಮಾಲಿಪಾಟೀಲ್, ಅಮರೇಶಪ್ಪ ಮೇಲ್ಮಳಿಗೆ, ನಿಂಗನಗೌಡ ಮಾಲಿಪಾಟೀಲ್, ಅಮರೇಗೌಡ ಮಾಲಿಪಾಟೀಲ್ ಮತ್ತು ಇತರ ರೈತ ಮುಖಂಡರು ಹಾಗೂ ಊರಿನ ಗುರು ಹಿರಿಯರು ಸದಸ್ಯರು ಉಪಸ್ಥಿತರಿದ್ದರು.

# ಚಳಿಗಾಲದಲ್ಲಿ ಮಕ್ಕಳನ್ನು ಕಾಡುವ. ನ್ಯೂಮೋನಿಯಾ ಕಾಯಿಲೆ ಬಗ್ಗೆ ತಾಯಿಂದಿರರು ಜಾಗೃತಿ ವಹಿಸುವುದು ಅಗತ್ಯ :ಬಾಲಪ್ಪ ನಾಯಕ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿಸೆಂಬರ. 30 : ಸಿಂಧನೂರು ತಾಲೂಕಿನ ಸಮೀಪದ ಅರಗಿನ ಮರ ಕ್ಯಾಂಪ್ ನಲ್ಲಿ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಮತ್ತು ಆರೋಗ್ಯ ಮತ್ತು ಕ್ಷೇಮ ಮಂದಿರ ಅರಗಿನ ಮರ ಇವರ ಸಂಯುಕ್ತ ಆಶ್ರಯದಲ್ಲಿ ಅರಗಿನ ಮರ ಕ್ಯಾಂಪ್ ನಲ್ಲಿ ಚಳಿಗಾಲದಲ್ಲಿ ಮಕ್ಕಳಲ್ಲಿ ಕಂಡುಬರುವ ನ್ಯೂಮೊನಿಯಾ ಕಾಯಿಲೆ ಕುರಿತು ಅಂಗನವಾಡಿ ಕೇಂದ್ರದಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮದ ಕುರಿತು ಹಮ್ಮಿಕೊಳ್ಳಲಾಗಿತ್ತು ನಂತರ ಮಾತನಾಡಿದ.**

ಕ್ಷೇತ್ರ ಆರೋಗ್ಯ ಶಿಕ್ಷಣಧಿಕಾರಿ ಬಾಲಪ್ಪ




ನಾಯಕ ಅವರು ಮಾತನಾಡಿ ಚಳಿಗಾಲದಲ್ಲಿ ಹೆಚ್ಚಾಗಿ ಮಕ್ಕಳಲ್ಲಿ ನಿರಂತರ ಜ್ವರ ಕೆಮ್ಮು ಹಾಗೂ ಕಫ ಕಟ್ಟುವುದು ಮಕ್ಕಳಲ್ಲಿ ನ್ಯೂಮೋನಿಯಾ ಖಾಯಿಲೆಗೆ ಕಾರಣವಾಗುತ್ತದೆ ನ್ಯೂಮೋನಿಯಾ ತಡೆಗಟ್ಟಲು ರಕ್ಷಣೆ ಮತ್ತು ತಡೆಗಟ್ಟುವ ಚಿಕಿತ್ಸೆ ಮುಖ್ಯವಾಗಿದೆ ಮಗುವಿಗೆ ನ್ಯೂಮೊನಿಯಾ ಬರೆದ ಹಾಗೆ ಆರು ತಿಂಗಳವರೆಗೆ ಪೌಷ್ಟಿಕವಾಗಿರುವಂತ ಎದೆಹಾಲನ್ನು ಮಗುವಿಗೆ ಕೊಡಬೇಕಾದದ್ದು ಮುಖ್ಯವಾಗಿದೆ ಚಳಿಗಾಲದಲ್ಲಿ ಮಕ್ಕಳಿಗೆ ಶೀತ ಹೆಚ್ಚಾಗದಂತೆ ಬೆಚ್ಚನೆಯ ಉಡುಪುಗಳನ್ನು ಧರಿಸಬೇಕು ಚಳಿಯಿಂದ ಮಕ್ಕಳ ರಕ್ಷಣೆ ಮತ್ತು ಆರೈಕೆ ಮುಖ್ಯವಾಗಿದೆ ಮಕ್ಕಳಲ್ಲಿ ತೀವ್ರ ಉಸಿರಾಟದ ತೊಂದರೆಗಳು ಪಕ್ಕೆ ಸೆಳೆತಾ ಬಾಯಿಯಿಂದ ಉಸಿರಾಟದ ಪ್ರಾರಂಭ ಮಗುವಿಗೆ ಮೇಲಿಂದ ಮೇಲೆ ಜ್ವರ ಬರುವುದು ಇಂತಹ ಲಕ್ಷಣಗಳು ಕಂಡುಬಂದರೇ ಕೊಡಲೆ ಹತ್ತಿರದ ತಜ್ಞ ವೈದ್ಯರಲ್ಲಿ ಚಿಕಿತ್ಸೆ ಕೊಡಿಸಲು ಮರೆಯದಿರಿ ಹಾಗೂ ಮಕ್ಕಳಿಗೇ ಬಾಲ್ಯವಸ್ಥೆಯಲ್ಲಿ ಬರಬಹುದಾದ ಖಾಯಿಲೆಗಳಿಂದ ತಪ್ಪಿಸಲು ಮಕ್ಕಳಿಗೆ ವಯಸ್ಸಿಗೆ ಅನುಗುಣವಾಗಿ ಎಲ್ಲಾ ಲಸಿಕೆಯನ್ನು ಕೊಡಿಸಬೇಕು ಎಂದು ತಿಳಿಸಿದರು.

ನಂತರದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿಗಳು ನಿಂಗಮ್ಮ ಅವರು ಮಾತನಾಡುತ್ತಾ ಮಕ್ಕಳಲ್ಲಿ ನೆಗಡಿ ಜ್ವರ ಕೆಮ್ಮು ಮತ್ತು ಕಫ್ ಕಟ್ಟುವಿಕೆ ನ್ಯೂಮೋನಿಯಾ ಕಾಯಿಲಿಗೆ ತುತ್ತಾಗುವ ಸಾಧ್ಯತೆ ಹೆಚ್ಚು. ಅದಕ್ಕಾಗಿ ಪಾಲಕರು ಮಕ್ಕಳಿಗೆ ತಪ್ಪದೇ ಎದೆ ಹಾಲು ಕೊಡುವುದನ್ನು ಮುಂದುವರಿಸಿ ದ್ರವರೂಪದ ಪೌಷ್ಟಿಕ ಆಹಾರವನ್ನು ನೀಡುವ ಮೂಲಕ ಮಕ್ಕಳ ಆರೋಗ್ಯವನ್ನು ಪೌಷ್ಟಿಕ ಅಹಾರವನ್ನು ನೀಡುವ ಕಾಪಾಡುವದು ಮುಖ್ಯವಾಗಿದೆ. ಎಂದರು. ಈ ಸಂದರ್ಭದಲ್ಲಿ ಬಸವಂತಮ್ಮ ಮತ್ತು ರೂಪಾ ಅಂಗನವಾಡಿ ಕಾರ್ಯಕರ್ತರಾದ .ಆಶಾ ಕಾರ್ಯಕರ್ತರಾದ ಮಹೇಶ್ವರಿ. ಮಕ್ಕಳ ತಾಯಂದಿರು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

BECIL ನೇಮಕಾತಿ 2026–06 ಎಲೆಕ್ಟ್ರಿಷಿಯನ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಃಇಅಖಐ ನೇಮಕಾತಿ 2026: 06 ಎಲೆಕ್ಟ್ರಿಷಿಯನ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬ್ರಾಡ್‌ಕಾಸ್ಟ್ ಎಂಜಿನಿಯರಿಂಗ್ ಕನ್ಸಲ್ಟೆಂಟ್ಸ್ ಇಂಡಿಯಾ ಲಿಮಿಟೆಡ್ ಡಿಸೆಂಬರ್ 2025 ರ BE-CIL ಅಧಿಕೃತ ಅಧಿಸೂಚನೆಯ ಮೂಲಕ ಎಲೆಕ್ಟ್ರಿಷಿಯನ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ನೋಯ್ಡಾ – ಉತ್ತರ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 12–ಜನವರಿ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. /ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 29–12–2025 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12–ಜನವರಿ–2026 Official Website: becil.com

## ರಸ್ತೆ ಅಪಘಾತದಲ್ಲಿ ನಿವೃತ್ತ ಉಪತಹಸೀಲ್ದಾರ್ ಸಿದ್ದಲಿಂಗಪ್ಪ ಮೃತಿ

**ನೈಜ್ಯ ದೆಸೆ ನ್ಯೂಸ್**




ಮಾನ್ವಿ: ಪಟ್ಟಣದ ಮಾನ್ವಿ ಸಿಂಧನೂರು ರಸ್ತೆಯಲ್ಲಿ ಸೋಮವಾರ ರಾತ್ರಿ ದ್ವಿಚಕ್ರವಾಹನ ಸವಾರ ಹಾಗೂ ಪಾದಚಾರಿ ನಡುವೆ ನಡೆದ ಅಪಘಾತದಲ್ಲಿ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಜಯನಗರ ನಿವಾಸಿ ನಿವೃತ್ತ ಉಪತಹಸೀಲ್ದಾರ್ ಸಿದ್ದಲಿಂಗಪ್ಪ ವ.75 ವರ್ಷ ಇವರು ಗಂಭಿರವಾಗಿ ಗಾಯಗೊಂಡು ರಾಯಚೂರು ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು ಅರೋಪಿ ಬೈಕ್ ಸವಾರ ಯಾಸಿನ ಎನ್ನುವವರ ಮೇಲೆ ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖಾಧಿಕಾರಿ ಎ.ಎಸ್.ಐ.ಶಿವಲಿಂಗಪ್ಪ ತನಿಖೆ ಕೈಗೊಂಡಿದ್ದಾರೆ.

## ಪುಟ್ಟರಾಜ ಗವಾಯಿಗಳ ಸಾಧನೆ ವಿಕಲಚೇತನರಿಗೆ ಪ್ರೇರಣೆ :ಅಭಿನವ ಸೋಮನಾಥ ಶಿವಾಚಾರ್ಯ ಸ್ವಾಮೀಜಿ

**ನೈಜ್ಯ ದೆಸೆ ನ್ಯೂಸ್**

ಸಿರವಾರ: ತಾಲೂಕಿನ ನವಲಕಲ್ ಗ್ರಾಮ ಪಂಚಾಯಿತಿ ಕಾರ್ಯಾಲಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ವಿಕಲಚೇತನರ ಸಮನ್ವಯ ಸಭೆ ಅತ್ಯಂತ ಅರ್ಥಪೂರ್ಣವಾಗಿ ನಡೆಯಿತು.ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ನವಲಕಲ್ ಬೃಹನ್ಮಠದ ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿ ಆಶೀರ್ವಚನ ನೀಡಿದರು.



ಅವರು ಮಾತನಾಡಿ, ಪುಟ್ಟರಾಜ ಗವಾಯಿಗಳಂತಹ ಮಹಾನ್ ವಿಕಲಚೇತನ ಸಾಧಕರನ್ನು ಸ್ಮರಿಸಿ, ವಿಕಲಚೇತನರು ಯಾವುದೇ ಕ್ಷೇತ್ರದಲ್ಲೂ ಸಾಮಾನ್ಯ ಜನರಿಗಿಂತ ಕಡಿಮೆಯಲ್ಲ, ಪೈಪೋಟಿ ನೀಡುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಹೇಳಿದರು. ಗ್ರಾಮೀಣ ಭಾಗದ ವಿಕಲಚೇತನರಿಗೆ ಮಾಹಿತಿ ಹಾಗೂ ಸರಿಯಾದ ಮಾರ್ಗದರ್ಶನ ಸಿಗುವುದು ಇಂತಹ ಕಾರ್ಯಕ್ರಮಗಳ ಮೂಲಕವೇ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ವಿಜಯಕುಮಾರ್, ಗ್ರಾಮ ಪಂಚಾಯತಿ ಅಧ್ಯಕ್ಷರಾದ ದುರ್ಗಮ್ಮ ದುರ್ಗಪ್ಪ, ಸಂಕಲ್ಪ ವಿಕಲಚೇತನರ ಒಕ್ಕೂಟದ ಗೌರವಾಧ್ಯಕ್ಷರಾದ ದೇಸಾಯಿ ದೊತರಬಂಡಿ, ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶಿವಕುಮಾರ್ ಚಲ್ಮಲ್, ಜಿಲ್ಲಾ ಉಪಾಧ್ಯಕ್ಷರಾದ ಸಾವಿತ್ರಮ್ಮ, ವಿಕಲಚೇತನರ ಪುನರ್ವಸತಿ ಕಾರ್ಯಕರ್ತರ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶೇಖರಪ್ಪ ಮುರ್ಕಿಗುಡ್ಡ, ವಿಕಲಚೇತನ ಕಾರ್ಯಕರ್ತರಾದ ನಂದಕುಮಾರ್, ಅಯ್ಯಾಳಿ, ಮಲ್ಲಿಕಾರ್ಜುನ ಸೇರಿದಂತೆ ಅನೇಕ ವಿಕಲಚೇತನ ಬಂಧುಗಳು ಉಪಸ್ಥಿತ–ರಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದರು. ಕಾರ್ಯಕ್ರಮದ ಮೂಲಕ ವಿಕಲಚೇತನರ ಹಕ್ಕು, ಗೌರವ, ಸಬಲೀಕರಣ ಹಾಗೂ ಸಮಾಜದಲ್ಲಿ ಸಮಾನ ಅವಕಾಶಗಳ ಕುರಿತು ಜಾಗೃತಿ ಮೂಡಿಸಲಾಯಿತು.

# ಕೃಷ್ಣಗಿರಿ–ಹಿಲ್ಸ್, ರಾಯಚೂರಿನ ಇಸ್ಕಾನ್ ವೈಕುಂಠ ಏಕಾದಶಿ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: 30 ಡಿ, ಕೃಷ್ಣಗಿರಿ–ಹಿಲ್ಸ್, ಆಶಾಪುರ ರಸ್ತೆ ರಾಯಚೂರಿನ ಇಸ್ಕಾನ್ ವೈಕುಂಠ ಏಕಾದಶಿಯನ್ನು ಆಚರಿಸಿತು. ಈ ಸಂದರ್ಭದಲ್ಲಿ ಶ್ರೀ ಸಾರಥಿ ಶ್ಯಾಮ ದಾಸರು, ಶ್ರೀಕೃಷ್ಣನ ಕಣ್ಮರೆಯಾದ ನಂತರ, ಮಹಾನ್ ಶ್ರೀ ವೈಷ್ಣವ ಸಂತ ನಮ್ಮಾಳ್ವರು ಜನಿಸಿದರು ಎಂದು ಹೇಳಿದರು.**

ಅವರು ಭಗವಾನ್ ವಿಷ್ಣುವನ್ನು ವೈಭವೀಕರಿಸುವ ಅದ್ಭುತ ಹಾಡುಗಳನ್ನು ರಚಿಸಿದರು ಮತ್ತು ಹರಿ ಭಕ್ತಿಯನ್ನು ಹರಡಿದರು. ಅವನ ಭಕ್ತಿಗೆ ಮೆಚ್ಚಿದ ಹರಿಯು ಪೌಷ ಶುಕ್ಲ ಏಕಾದಶಿಯಂದು ಅವನನ್ನು ವೈಕುಂಠಕ್ಕೆ ಕರೆದೊಯ್ದನು. ಹಾಗಾಗಿ ಇದನ್ನು ವೈಕುಂಠ ಏಕಾದಶಿ ಎಂದು ಕರೆಯುತ್ತಾರೆ. ಕ್ಷಮೆಗಾಗಿ ಪ್ರಾರ್ಥಿಸುವ ಮತ್ತು ಉತ್ತರ ದಿಕ್ಕಿನ ದ್ವಾರದಿಂದ ವಿಷ್ಣು ದೇವಾಲಯವನ್ನು ಪ್ರವೇಶಿಸುವವನು ಪಾಪಗಳಿಂದ ಮುಕ್ತನಾಗಿ ವೈಕುಂಠಕ್ಕೆ ಹೋಗುತ್ತಾನೆ.





ಇಸ್ಕಾನ್ ರಾಯಚೂರಿನಲ್ಲಿ, ಜಾಗತಿ–ಕ ಶಾಂತಿ, ಭದ್ರತೆ ಮತ್ತು ಸಮೃದ್ಧಿಗಾಗಿ ನೂರಾರು ಭಕ್ತರು ಬೆಳಿಗ್ಗೆ 6 ಗಂಟೆಗೆ ವಿಷ್ಣು ಸಹಸ್ರನಾಮವನ್ನು ಪಠಿಸಿದರು. ನೂರಾರು ಭಕ್ತರಿಗೆ ಏಕಾದಶಿ ವಿಶೇಷ ಪ್ರಸಾದವನ್ನು ದಿನವಿಡೀ ವಿತರಿಸಲಾಯಿತು. ನೂರಾರು ಭಗವದ್ಗೀತೆ ಪುಸ್ತಕಗಳನ್ನು ವಿತರಿಸಲಾಯಿತು. ತುಲಾ–ಭಾರ ಸೇವೆಯನ್ನು ಸಹ ಆಯೋಜಿಸಲಾಯಿತು.

ಭಗವಾನ್ ಶ್ರೀ ಕೃಷ್ಣ ಭಾರತದ ಪ್ರಮುಖ ರಫ್ತು ವಸ್ತುವಾಗಿದ್ದಾರೆ ಮತ್ತು ಈ ಮೂಲಕ ಭಾರತದ ಆಧ್ಯಾತ್ಮಿಕ ವೈಭವವು ಎಲ್ಲೆಡೆ ಹರಡಿದೆ ಮತ್ತು ಲಕ್ಷಾಂತರ ಜನರು ಭಾರತವನ್ನು ಆಧ್ಯಾತ್ಮಿಕ ಪವಿತ್ರ ಸ್ಥಳವೆಂದು ಪರಿಗಣಿಸಿ ಮೆಚ್ಚುತ್ತಿದ್ದಾರೆ ಮತ್ತು ಅವರು ಆಧ್ಯಾತ್ಮಿಕ ಆಶ್ರಯ ಪಡೆಯಲು ಮತ್ತು ಸಾಂತ್ವನ ಪಡೆಯಲು ಭಾರತಕ್ಕೆ ಬರುತ್ತಾರೆ ಮತ್ತು ಪುನರುಜ್ಜೀವನ, ತೀಥ–ರ್ಯಾತ್ರೆಗಳಿಗೆ ಹೋಗುವುದು ಮತ್ತು ಅವರ ಉಪಸ್ಥಿತಿಯು ಭಾರತೀಯರಿಗೆ ತಮ್ಮದೇ ಆದ ಸಂಸ್ಕೃತಿಯ ಮೇಲಿನ ನಂಬಿಕೆ ಮತ್ತು ಮೆಚ್ಚುಗೆಯನ್ನು ಪುನರುಜ್ಜೀವನಗೊಳಿಸುತ್ತದೆ ಮತ್ತು ಇದು ಭಾರತದಲ್ಲಿಯೂ ಸಹ ಭಕ್ತಿಯ ಪುನರುಜ್ಜೀವನಕ್ಕೆ ಕಾರಣವಾಗುತ್ತದೆ, ಆದ್ದರಿಂದ ಪ್ರಪಂಚದಾದ್ಯಂತ ಹರಡುತ್ತಿರುವ ಭಾರತೀಯರ ಆಧ್ಯಾತ್ಮಿಕ ಸಂಸ್ಕೃತಿಯ ಸಹಜೀವನದ ಪರಿಣಾಮವು ಪ್ರಪಂಚದಾದ್ಯಂತ ಜನರನ್ನು ಪ್ರೇರೇಪಿಸುತ್ತದೆ ಮತ್ತು ನಂತರ ವಿದೇಶಿಯರು ಭಾರತಕ್ಕೆ ಬಂದು ಭಾರತೀಯರಿಗೆ ಸ್ಫೂರ್ತಿ ನೀಡುತ್ತಾರೆ. ಈ ರೀತಿಯಾಗಿ ಇಸ್ಕಾನ್‌ನ ಪ್ರಮುಖ ಕೊಡುಗೆಯೆಂದರೆ ಅಂತರರಾಷ್ಟ್ರೀಕರಣ–ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ಜಾಗತೀಕರಣ.

# ವಾರಸುದಾರರ ಪತ್ತೆಗೆ ರೈಲ್ವೇ ಪೊಲೀಸರ ಮನವಿ

**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಯಾದಗಿರಿ ರೈಲ್ವೇ ನಿಲ್ದಾಣದ ವೇದಿಕೆ ನಂಬರ್ 01 ರಲ್ಲಿ ಡಿಸೆಂಬರ್ 26ರ ಬೆಳಿಗ್ಗೆ 7.10ಗಂಟೆಗೆ ಅಸ್ವಸ್ತಗೊಂಡಿದ್ದ ಅಪ–ರಿಚಿತ ಸುಮಾರು 70 ವರ್ಷದ ಗಂಡಸ್ಸು ಯಾವುದೋ ವಯೋಸಹಜ ಖಾಯಿಲೆಯಿಂದ ಬಳಲಿ ಸ್ವಾಭಾವಿಕವಾಗಿ ಮೃತಪಟ್ಟಿದ್ದು, ಈ ಕುರಿತು ರಾಯಚೂರಿನ ರೈಲ್ವೇ ಠಾಣೆಯಲ್ಲಿ ಯು.ಡಿ.ಆರ್ ನಂ:72/2025 ಯು/ಎಸ್ 194 ಬಿಎನ್‌ಎಸ್‌ಎಸ್ ರಿತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**



ವ್ಯಕ್ತಿಯನ್ನು ಯಾದಗಿರಿಯ ಯೀಮ್ಸ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಯಾವುದೋ ವಯೋಸಹಜ ಖಾಯಿಲೆಯಿಂದ ಬಳಲಿ ಸ್ವಾಭಾವಿಕವಾಗಿ ಮೃತಪಟ್ಟದ್ದಾರೆ. ಮೃತದೇಹ ದೊರೆತ ಘಟನಾ ಸ್ಥಳಗಳಲ್ಲಿ ಮೃತನ ವಾರಸುದಾರರು ಯಾರು ಪತ್ತೆಯಾಗಿರುವುದಿಲ್ಲ. ಆದ್ದರಿಂದ ಮೃತನ ವಾರುಸುದಾರ ಪತ್ತೆ ಹಾಗೂ ಪಿ.ಎಂ.ಇ. ಸಲುವಾಗಿ ಮೃತದೇಹಗಳನ್ನು ಯಾದಗಿರಿ ಯೀಮ್ಸ್ ಜಿಲ್ಲಾ ಆಸ್ಪತ್ರೆಯ ಶೀತಲ ಶವಗಾರದಲ್ಲಿ ಇಡಲಾಗಿದೆ. ಅಪರಿಚಿತ ಗಂಡಸ್ಸು ವಯಸ್ಸು ಸುಮಾರು 70 ವರ್ಷ, ಎತ್ತರ ಸುಮಾರು 5.4 ಅಡಿ, ಉದ್ದ ಮುಖ, ಉದ್ದನೆಯ ಮೂಗು, ಕಪ್ಪು ಕಣ್ಣುಗಳು, ತಲೆಯಲ್ಲಿ 2 ಇಂಚು ಬಿಳಿ ಕೂದಲು, 2 ಇಂಚು ಬಿಳಿ ಗಡ್ಡ ಮೀಸೆ ಬಿಟ್ಟಿದ್ದು, ಬಡುಕಲು ಶರೀರ ಹೊಂದಿರುತ್ತಾನೆ.

ಒಂದು ನೀಲಿ ಬಣ್ಣ ಗೆರೆಯುಳ್ಳ ಮಾಸಿದ ಬಿಳಿಯ ಶರ್ಟು, ಒಂದು ಕಪ್ಪು ಬಣ್ಣದ ಪ್ಯಾಂಟು ಒಂದು ಕೆಂಪು ಮತ್ತು ನೀಲಿ ಬಣ್ಣ ಮಿಶ್ರಿತ ಬಟ್ಟೆಯನ್ನು ಧರಿಸಲಾಗಿದೆ. ಕೈಯಲ್ಲಿ ಒಂದು ಹಳೆಯ ದಾರವನ್ನು ಹೊಂದಲಾಗಿದೆ. ಈ ಮೃತನ ವಾರಸುದಾರರು ಪತ್ತೆಯಾದಲ್ಲಿ ಅಥವಾ ಈ ಮೃತನ ಹೋಲಿಕೆಯ ಪುರುಷ ಕಾಣೆಯಾದ ಪ್ರಕರಣ ದಾಖಲಾಗಿದ್ದಲ್ಲಿ ರಾಯಚೂರು ರೈಲ್ವೇ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ:08532 231716 ಅಥವಾ ಮೊಬೈಲ್ ಸಂಖ್ಯೆ: 9480802111 ಅಥ–ವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ: 080–22871291ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ರೈಲ್ವೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುತ್ತಿಗೆದಾರರಿಂದ ನಗದು ಹಣ ಪಡೆಯದೇ ಆಹಾರ ಪದಾರ್ಥಗಳನ್ನು ಪೂರೈಸುವಂತೆ ಅಗತ್ಯ ಕ್ರಮ ಕೈಗೊಳ್ಳಿ: ಶಾಸಕ ಆರ್.ಬಸನಗೌಡ ತುರ್ವಿಹಾಳ

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ಡಿ 30 ಪಟ್ಟಣದಲ್ಲಿರುವ ವಿವಿಧ ಇಲಾಖೆಗಳ ವಸತಿ ನಿಲಯಗಳಲ್ಲಿ ರಾತ್ರಿ ವೇಳೆ ಕಡ್ಡಾಯವಾಗಿ ವಾಸ ಮಾಡಬೇಕೆಂದು ಖಾದಿ ಮತ್ತು ಗ್ರಾಮದ್ಯೋಗ ಮಂಡಳಿ ಅಧ್ಯಕ್ಷರು ಹಾಗೂ ಶಾಸಕರಾದ ಆರ್.ಬಸನಗೌಡ ತುರವಿಹಾಳ ತಾಕೀತು ಮಾಡಿದ್ದಾರೆ.**



ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ತಾಲೂಕಾಧಿಕಾರಿಗಳ ಮತ್ತು ವಸತಿ ನಿಲಯಗಳ ನಿಲಯಪಾಲಕರ ಮತ್ತು ವಸತಿ ಶಾಲೆಗಳ ಪ್ರಾಂಶುಪಾಲರ ಸಭೆಯನ್ನು ಮಂಗಳವಾರ ನಡೆಸಿದರು. ಸಭೆಯಲ್ಲಿ ಮಾತನಾಡಿದ ಅವರು ವಸತಿ ನಿಲಯಗಳಲ್ಲಿ ವಾರ್ಡನಗಳು ಕಡ್ಡಾಯವಾಗಿ ವಾಸ ಮಾಡಬೆಕು. ವಸತಿ ನಿಲಯಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸುತ್ತಿರುವ ಗುತ್ತಿಗೆದಾರರಿಂದ ನಗದು ಹಣವನ್ನು ಪಡೆಯದೇ ಆಹಾರ ಪದಾಥ–ರ್ಗಗಳನ್ನು ಪೂರೈಸುವಂತೆ ತಾಲೂಕು ಅಧಿಕಾ–ರಿಗಳು ಗುತ್ತಿಗೆದಾರರಿಗೆ ಸೂಚಿಸಬೇಕು. ವಸತಿ ನಿಲಯಗಳಿಗೆ ಇನ್ಮೂಂದೆ ಆಹಾರ ಪದಾಥ–ರ್ಗಗಳನ್ನು ಗುತ್ತಿಗೆ ಪಡೆದ ಗುತ್ತಿಗೆದಾರರು ಆಹಾರ ಸಾಮಾಗ್ರಿಗಳನ್ನೇ ಪೂರೈಸುವಂತೆ ತಾಲೂಕು ಅಧಿಕಾರಿಗಳು ಸೂಚಿಸಬೇಕು.

ವಾರ್ಡನ್‌ಗಳು ನಗದು ಹಣವನ್ನು ಪಡಿಯದೇ ಸಾಮಾಗ್ರಿಗಳ ಪಡೆಯಬೇಕೆಂದರು. ವಾರಕೊಮ್ಮೆ ವಸತಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಿಸಬೇಕು, ಪ್ರತಿಯೊಂದು ನಿಲಯಗಳಿಗೆ ತಾಲೂಕು ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಬೇಕು. ನೋಡಲ್ ಅಧಿಕಾರಿಗಳು ವಸತಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಆಲಿಸಬೇಕು. ಅನುಮತಿ ಇಲ್ಲದೇ ವಿದ್ಯಾರ್ಥಿಗಳನ್ನು ಹೊರಗಡೆ ಕಳುಹಿಸುವಂತಿಲ್ಲ. ವಸತಿ ನಿಲಯಗಳಲ್ಲಿ ದಿನಪತ್ರಕೆಗಳು ಹಾಗೂ ಸ್ಪರ್ದಾತ್ಮಕ ಪುಸ್ತಕಗಳ ಒಳಗೊಂಡು ಸುಸಜ್ಜಿತವಾದ ಗ್ರಂಥಾಲಯಗಳನ್ನು ನಿರ್ಮಿಸಬೇಕು.

ಸಿಬ್ಬಂದಿಯವರು ಸ್ವಚ್ಚತೆಯಿಂದ ಅಡುಗೆ ಮಾಡಬೆಕು ಹಾಗೂ ಅಡುಗೆ ಬಟ್ಟೆ ಧರಿಸಿ ಅಡುಗೆ ಮಾಡಬೆಕು. ಎಸ್.ಎಸ್.ಎಲ್.ಸಿ ಪಲಿತಾಂಶ ಸುದಾರಿಸಲು ಬಿ.ಇಡಿ ಪಧವಿ ಪಡೆದಿರುವ ವಾರ್ಡನಗಳು ವಸತಿ ನಿಲಯದಲ್ಲಿ ತರಗತಿಗಳು ನಡೆಸಬೇಕೆಂದರು. ಈ ಸಂದರ್ಭದಲ್ಲಿ ತಾ.ಪಂ ಇಒ ಅಮರೇಶ ಯಾದನ, ಸಹಾಯಕ ನಿರ್ದೇಶಕ ಸೊಮನಗೌಡ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ. ಅಲ್ಪಸಂಖ್ಯಾತರ ಇಲಾಖೆ. ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆಯ ತಾಲೂಕಾಧಿಕಾರಿಗಳು ಮತ್ತು ವಸತಿ ನಿಲಯಗಳ ವಾರ್ಡನ್‌ಗಳಿದ್ದರು. ಮಸ್ಕಿಯ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶಾಸಕರ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆ ನಡೆಯಿತು.

# ಐತಿಹಾಸಿಕ ಅಂಬಾ ಮಹೋತ್ಸವ–2026ರಲ್ಲಿ ರಾಜ್ಯದ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ಸಚಿವರು, ಗಣ್ಯರು ಭಾಗಿ; ಶಾಸಕ ಹಂಪನಗೌಡ ಬಾದರ್ಲಿ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಭಕ್ತಿ–ಶಕ್ತಿ ಪರಂಪರೆಯ ದಿವ್ಯ ಸಂಗಮ ಸಿಂಧನೂರ ತಾಲೂಕಿನ ಸೋಮಲಾಪುರದ ಅಂಬಾಮಠದ ಅಂಬಾ ಮಹೋತ್ಸವ 2026ರ ಕಾರ್ಯಕ್ರಮವು ಜನವರಿ 2ರಿಂದ ಜನವರಿ 6ರವರೆಗೆ ನಿಗದಿಯಾಗಿದ್ದು, ಜನವರಿ 3ರಂದು ನಡೆಯಲಿರುವ ಅಂಬಾ ದೇವಿ ಮಹಾರಥ–ೋತ್ಸವ ಮತ್ತು ಜಂಬೂ ಸವಾರಿ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಮತ್ತು ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಹಾಗೂ ವಿವಿಧ ಇಲಾಖೆಗಳ ಸಚಿವರು, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಸಂಸದರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಮತ್ತು ಇನ್ನೀತರ ಗಣ್ಯರು ಭಾಗಿಯಾಗಲಿದ್ದಾರೆ.**

ಎಂದು ಸಿಂಧನೂರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಹೇಳಿದರು. ಸಿಂಧನೂರ ನಗರದ ಕಾಕತಿಯ ಕ್ಲಬ್ ಆವರಣದಲ್ಲಿ ಡಿಸೆಂಬರ್ 30ರಂದು ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು. ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಜನವರಿ 03ರಂದು ಮಧ್ಯಾಹ್ನ 2 ಗಂಟೆಗೆ ಸಿಂಧನೂರು ನಗರಕ್ಕೆ ಆಗಮಿಸುವರು. ಅಂದು ಸಿಂಧನೂರ ನಗರದಲ್ಲಿ ಮಧ್ಯಾಹ್ನ 2 ರಿಂದ 2:30ರವರೆಗೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು. ಮಧ್ಯಾಹ್ನ ಭೋಜನದ ವಿರಾಮದ



ನಂತರ 3:30 ರಿಂದ ಅಂಬಾಮಠಕ್ಕೆ ತೆರಳಿ ಸಂಜೆ 4 ಗಂಟೆಗೆ, ಸಿಂಧನೂರ ವಿಧಾನಸಭಾ ಕ್ಷೇತ್ರದಲ್ಲಿ ಅಂದಾಜು 400 ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ಮತ್ತು ಲೋಕಾರ್ಪಣೆ ಮಾಡಲಿದ್ದಾರೆ.

ಸಂಜೆ 5 ಗಂಟೆಗೆ ಅಂಬಾದೇವಿ ಮಹಾ ರಥೋತ್ಸವ ಮತ್ತು ಜಂಬೂಸವಾ–ರಿಗೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ಅಂಬಾಮಠವು 400 ವರ್ಷಗಳ ಇತಿಹಾಸ ಹೊಂದಿದ್ದು, ತೆಲಂಗಾಣ, ಮಹಾರಾಷ್ಟ್ರ ಆಂಧ್ರ ಸೇರಿದಂತೆ ಐದಾರು ರಾಜ್ಯಗಳ ಮತ್ತು ನಮ್ಮ ರಾಜ್ಯದ ಲಕ್ಷಾಂತರ ಭಕ್ತರು ಅಂಬಾಮಠದ ಜಾತ್ರೆಗೆ ಆಗಮಿಸುತ್ತಾರೆ. ಈ ವರ್ಷ ಮಹಾ ರಥೋತ್ಸವವು ಅದ್ದೂರಿಯಾಗಿ ನಡೆಯಲಿದೆ. ಅಂಬಾ ಮಹೋತ್ಸವ ನಿಮಿತ್ತ ಜನವರಿ 2ರಿಂದ 6ರವರೆಗೆ ಸರಿಗಮಪ ಖ್ಯಾತಿಯ ಗಾಯಕರು ಮತ್ತು ಇನ್ನೀತರ ಕಲಾವಿದ–ರಿಂದ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಪ್ರಪ್ರಥಮ ಬಾರಿಗೆ ಜಂಬೂಸವಾರಿ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮ, ಹಾಸ್ಯ ಸಂಜೆ, ಅಹೋ ರಾತ್ರಿ ತತ್ವಪದ ಗಾಯನ, ಕಡುಬಿನ ಕಾಳಗ, ಸಂಗೀತ ಸಂಜೆ, ನಾಟಕ, ದೇವಿ ಪಲ್ಲಕ್ಕಿ ಉತ್ಸವ, ಜಾನಪದ ಜಾತ್ರೆ, ಕುಂಬೋತ್ಸವ, ತತ್ವಪದ ಗಾಯನ ಸೇ–ರಿದಂತೆ ಅನೇಕ ಕಾರ್ಯಕ್ರಮಗಳು ನಡೆಯಲಿವೆ.

ಜಾತ್ರೆಗೆ ಆಗಮಿಸುವ ಲಕ್ಷಾಂತರ ಭಕ್ತ–ರಿಗೆ ಅನುಕೂಲವಾಗಲು ಈ ಬಾರಿ ಮಠದ ಆವರಣವನ್ನು ಅಚ್ಚುಕಟ್ಟಾಗಿ ಸಿದ್ಧಪಡಿಸಲಾಗಿದೆ. ರಸ್ತೆ, ಕುಡಿಯುವ ನೀರು, ಶುಚಿತ್ವ ಸೇರಿದಂತೆ ಭಕ್ತ–ರಿಗೆ ಅಗತ್ಯ ಮೂಲಭೂತ ಸೌಕರ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಈ ಬಾರಿ ಮಠದ ಆವರಣದಲ್ಲಿ 132 ಅಡಿ ಅಗಲದ ರಥಬೀದಿಯನ್ನು ಸುಸಜ್ಜಿತವಾಗಿ ಸಿದ್ಧಪಡಿಸಲಾಗಿದೆ. ಜೊತೆಗೆ ಈ ಬಾರಿ ಮಠದ ಹತ್ತಿರದ 9 ಎಕರೆ ಜಾಗದಲ್ಲಿ ಮಿಟಾಯಿ, ಬಳೆ, ಆಟಿಕೆ ಸಾಮಾನು, ಆಟದ ಯಂತ್ರಗಳ ಹಾಗೂ ಇನ್ನೀತರ ಜಾತ್ರಾ ಅಂಗಡಿಗಳಿಗೆ ಒಂದೆಡೆ ಸಾಲಾಗಿ ಶಿಸ್ತುಬದ್ಧವಾಗಿ ವ್ಯವಸ್ಥೆ ಮಾಡಲಾಗಿದೆ. ಜಾತ್ರಾ ಹಿನ್ನೆಲೆಯಲ್ಲಿ ತಲಾ 6 ಹೆಲ್ಪ್ ಡೆಸ್ಕ್ ಹಾಗೂ ಹೆಲ್ತ್ ಡೆಸ್ಕ್ ಸ್ಥಾಪಿಸಲಾಗಿದೆ. ಸ್ಥಳೀಯ ವಿವಿಧ ಕಾಲೇಜುಗಳ ಎನ್‌ಎಸ್‌ಎಸ್ ಹಾಗೂ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳನ್ನು ಹಾಗೂ ತಾಲೂಕಿನ ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು ಮತ್ತು ತಾಲೂಕು ಮಟ್ಟದ ಅಧಿಕಾರಿಗಳನ್ನು ಒಳಗೊಂಡು ತಂಡ ರಚಿಸಿ ಜಾತ್ರೋತ್ಸವದ ನಾನಾ ಸೇವೆಗೆ ನಿಯೋಜನೆ ಮಾಡಿದ್ದೇವೆ ಎಂದು ಶಾಸಕರು ಮಾಹಿತಿ ನೀಡಿದರು.

ರಾಯಚೂರು ಜಿಲ್ಲೆಯ ಇತಿಹಾಸದಲ್ಲಿಯೇ ಸಿಂಧನೂರು ತಾಲೂಕು ವ್ಯಾಪ್ತಿಯಲ್ಲಿ ಏಕಕಾಲಕ್ಕೆ 24 ಕಂದಾಯ ಗ್ರಾಮಗಳಿಗೆ ಅಧಿಸೂಚನೆ ಹೊರಡಿಸಿ ಘೋಷಿಸಿ ಆಯಾ ಕಂದಾಯ ಗ್ರಾಮದಲ್ಲಿನ ಫಲಾನುಭವಿಗಳಿಗೆ ಕಂದಾಯ ಸಚಿವರು ಸಾಂಕೇತಿಕವಾಗಿ ಹಕ್ಕುಪತ್ರ ವಿತರಣೆ ಮಾಡಲಿದ್ದಾರೆ ಎಂದು ಶಾಸಕರು ತಿಳಿಸಿದರು. 174 ಕೋಟಿ ರು ವೆಚ್ಚದಲ್ಲಿ ಅಂದಾಜು 20,000 ಎಕರೆ ಜಮೀನಿಗೆ ನೀರು ಪೂರೈಸುವ ಏತ ನೀರಾವರಿ ಯೋಜನೆಗೆ, 69 ಕೋಟಿ ರೂ ವೆಚ್ಚದಲ್ಲಿ ಬ್ರಿಜ್ ಮತ್ತು ಬ್ಯಾರೇಜ್ ನಿರ್ಮಾಣ, 39 ಕೋಟಿ ರು ವೆಚ್ಚದಲ್ಲಿ ಸಿಂಧನೂರಿನ ಹಳ್ಳಕ್ಕೆ ಬ್ರಿಜ್ ಕಮ್ ಬ್ಯಾರೇಜ್ ನಿರ್ಮಾಣ, ಗಾಂಧಿನಗರದಿಂದ ಗೊರೆಬಾಳ ಗ್ರಾಮದವರೆಗೆ ರಸ್ತೆ ಕಾಮಗಾರಿ ಸೇರಿದಂತೆ ನಾನಾ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತದೆ.

ಸಿಂಧನೂರು ತಾಲೂಕಿನಲ್ಲಿ ಅಂ–ದಾಜು 18 ಪದವಿ ಕಾಲೇಜುಗಳು, 32 ಪಿಯುಸಿ ಕಾಲೇಜ್ ಗಳಿದ್ದು ಅಂದಾಜು 25,000 ಕಾಲೇಜು ವಿದ್ಯಾರ್ಥಿಗಳಿಗೆ ಆಯಾ ಗ್ರಾಮಗಳಿಂದ ಸಿಂಧನೂರು ನಗರಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ವಿದ್ಯಾರ್ಥಿಗಳಿಗೆಂದೇ 5 ಕೋಟಿ ರೂ ವೆಚ್ಚದಲ್ಲಿ 15 ಬಸ್ಸುಗಳಿಗೆ ಚಾಲನೆ ನೀಡುವ ಕಾರ್ಯಕ್ರಮವು ಸಹ ಇದೇ ವೇಳೆ ನಡೆಯಲಿದೆ ಎಂದು ಶಾಸಕರು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸಚಿವರಾದ ಶರಣಪ್ರಕಾಶ ಪಾಟೀಲ್, ರಾಮಲಿಂಗಾರೆಡ್ಡಿ ಸತೀಶ್ ಜಾರಕಿಹೊಳಿ, ಪ್ರಿಯಾಂಕ ಖರ್ಗೆ, ಶಿವರಾಜ ತಂಗಡಗಿ, ಎನ್.ಎಸ್.ಬೋಸರಾಜು ಸೇರಿದಂತೆ ಇನ್ನಿತರ ಸಚಿವರು ಭಾಗಿಯಾಗಲಿದ್ದಾರೆ ಎಂದು ಶಾಸಕರು ತಿಳಿಸಿದರು. ಸಿಂಧನೂರು ತಾಲೂಕಾಡಳಿತ, ತಾಲೂಕ್ ಪಂಚಾಯತ್ ಹಾಗೂ ಧಾರ್ಮಿಕ ದತ್ತಿ ಇಲಾಖೆ ಇವರ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ತಹಸೀಲ್ದಾರರಾದ ಅರುಣ ದೇಸಾಯಿ, ತಾಪಂ ಇಓ ಚಂದ್ರಶೇಖರ, ಮುಖಂಡರಾದ ಆರ್ ಸಿ ಪಾಟೀಲ, ಖಾಜಿ ಮಲಿಕ್ ಹಾಗೂ ಇತರರು ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಹೋಮಿಯೋಪತಿ ಎಂಡಿ ಪೀಡಿಯಾಟ್ರಿಕ್ಸ್‌ನಲ್ಲಿ

ಹೋಮಿಯೋಪತಿಯಲ್ಲಿ ಎಂಡಿ (ಪೀಡಿಯಾಟ್ರಿಕ್ಸ್) ಮೂರು ವರ್ಷಗಳ ಸ್ನಾತಕೋತ್ತರ ಕೋರ್ಸ್ ಆಗಿದ್ದು, ಇದು ಬಿಎಚ್‌ಎಂಎಸ್ ಪದವೀಧರರಿಗೆ ಹೋಮಿಯೋಪತಿ ತತ್ವಗಳನ್ನು ಬಳಸಿಕೊಂಡು ಮಕ್ಕಳು ಮತ್ತು ಹದಿಹರೆಯದವರ ಆರೋಗ್ಯ ಸ್ಥಿತಿಗಳಿಗೆ ಚಿಕಿತ್ಸೆ ನೀಡುವಲ್ಲಿ ಪರಿಣತಿ ಹೊಂದಲು ತರಬೇತಿ ನೀಡುತ್ತದೆ. ಪ್ರವೇಶವು ಪ್ರಾಥಮಿಕವಾಗಿ ಅಖಿಲ ಭಾರತ ಆಯುಷ್ ಸ್ನಾತಕೋತ್ತರ ಪ್ರವೇಶ ಪರೀಕ್ಷೆ (AIAPGET) ಮೂಲಕ ನಡೆಯುತ್ತದೆ. ಅವಧಿ: 3 ವರ್ಷಗಳು.ಅರ್ಹತೆ: ಅಭ್ಯರ್ಥಿಗಳು ಒಂದು ವರ್ಷದ ಕಡ್ಡಾಯ ಇಂಟರ್ನ್‌ಶಿಪ್ ಸೇರಿದಂತೆ 5.5 ವರ್ಷಗಳ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಹೋಮಿಯೋಪತಿ ಔಷಧ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಬ್ಯಾಚುಲರ್ (BHMS) ಪದವಿಯನ್ನು ಹೊಂದಿರಬೇಕು.ಪ್ರವೇಶ ಪ್ರಕ್ರಿಯೆ: ಪ್ರವೇಶವು ಸಾಮಾನ್ಯವಾಗಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ನಡೆಸುವ ಂಖಂಕಉಇಖ ಪರೀಕ್ಷೆಯಲ್ಲಿನ ಅಂಕಗಳಿಂದ ನಿರ್ಧರಿಸಲ್ಪಟ್ಟ ಅರ್ಹತೆಯನ್ನು ಆಧರಿಸಿದೆ. ಕೆಲವು ಸಂಸ್ಥೆಗಳು ತಮ್ಮದೇ ಆದ ನಿರ್ದಿಷ್ಟ ಪ್ರವೇಶ ಮತ್ತು ಸಂದರ್ಶನ ಪ್ರಕ್ರಿಯೆಗಳನ್ನು ಹೊಂದಿರಬಹುದು.ಆಡಳಿತ ಮಂಡಳಿ: ಕೋರ್ಸ್ ಪಠ್ಯಕ್ರಮ ಮತ್ತು ಕಾಲೇಜುಗಳನ್ನು ರಾಷ್ಟ್ರೀಯ ಹೋಮಿಯೋಪತಿ ಆಯೋಗ (NCH) ಅನುಮೋದಿಸಿದೆ ಮತ್ತು ನಿಯಂತ್ರಿಸುತ್ತದೆ. ಎಂ.ಡಿ. (ಹೊಂ.) ಪೀಡಿಯಾಟ್ರಿಕ್ಸ್ ಪಠ್ಯಕ್ರಮವು ಸಾಮಾನ್ಯ ಮಕ್ಕಳ ಜ್ಞಾನವನ್ನು ನಿರ್ದಿಷ್ಟ ಹೋಮಿಯೋಪತಿ ಅನ್ವಯಿಕೆಗಳೊಂದಿಗೆ ಸಂಯೋಜಿಸುತ್ತದೆ, ಮಕ್ಕಳ ವಿಶಿಷ್ಟ ಆರೋಗ್ಯ ಅಗತ್ಯಗಳ ಮೇಲೆ ಕೇಂದ್ರೀಕರಿಸುತ್ತದೆ. ಅಧ್ಯಯನದ ಪ್ರಮುಖ ಕ್ಷೇತ್ರಗಳು: ಪೀಡಿಯಾಟ್ರಿಕ್ಸ್‌ನ ಮೂಲಭೂತ ಅಂಶಗಳು: ಮಕ್ಕಳ ಆರೋಗ್ಯ, ಬೆಳವಣಿಗೆ ಮತ್ತು ಅಭಿವೃದ್ಧಿ, ಪೋಷಣೆ ಮತ್ತು ರೋಗಗಳ ತಡೆಗಟ್ಟುವ ಅಂಶಗಳ ಸಾಮಾನ್ಯ ತತ್ವಗಳು. ಹೋಮಿಯೋಪತಿ ತತ್ವಶಾಸ್ತ್ರ: ಮಕ್ಕಳ ಪ್ರಕರಣಗಳಿಗೆ ಹೋಮಿಯೋಪತಿ ತತ್ವಗಳು ಮತ್ತು ತತ್ವಶಾಸ್ತ್ರದ ಅನ್ವಯ (ಉದಾ., ಆರ್ಗನಾನ್ ಆಫ್ ಮೆಡಿಸಿನ್). ಕ್ಲಿನಿಕಲ್ ತರಬೇತಿ: ವಿವಿಧ ಕ್ಲಿನಿಕಲ್ ಸೆಟ್ಟಿಂಗ್‌ಗಳಲ್ಲಿ (OPD, IPD, NICU) ಹೋಮಿಯೋಪತಿ ಪರಿಹಾರಗಳನ್ನು ಬಳಸಿಕೊಂಡು ಮಕ್ಕಳ ಕಾಯಿಲೆಗಳ ರೋಗನಿರ್ಣಯ, ಚಿಕಿತ್ಸಾ ಯೋಜನೆ ಮತ್ತು ನಿರ್ವಹಣೆ. ಸಂಶೋಧನೆ: ಹೋಮಿಯೋಪತಿ ಅಭ್ಯಾಸಕ್ಕೆ ವೈಜ್ಞಾನಿಕ ವಿಧಾನವನ್ನು ಬೆಳೆಸಲು ಸಂಶೋಧನಾ ವಿಧಾನ ಮತ್ತು ಜೈವಿಕ ಅಂಕಿಅಂಶಗಳನ್ನು ಸೇರಿಸಲಾಗಿದೆ. ಪೀಡಿಯಾಟ್ರಿಕ್ಸ್‌ನಲ್ಲಿ ಎಂಡಿ (ಹೊಂ.) ಪೂರ್ಣಗೊಳಿಸಿದ ನಂತರ, ಪದವೀಧರರು ವಿವಿಧ ಪಾತ್ರಗಳನ್ನು ನಿರ್ವಹಿಸಬಹುದು, ಅವುಗಳೆಂದರೆ: ಆಸ್ಪತ್ರೆಗಳು ಅಥವಾ ಖಾಸಗಿ ಅಭ್ಯಾಸದಲ್ಲಿ ಹೋಮಿಯೋಪತಿ ಪೀಡಿಯಾಟ್ರಿಕ್ ಸಲಹೆಗಾರ/ತಜ್ಞ, ಸರ್ಕಾರಿ ಅಥವಾ ಖಾಸಗಿ ಆರೋಗ್ಯ ರಕ್ಷಣಾ ವ್ಯವಸ್ಥೆಗಳಲ್ಲಿ ವೈದ್ಯಕೀಯ ಅಧಿಕಾರಿ.ಹೋಮಿಯೋಪತಿ ವೈದ್ಯಕೀಯ ಕಾಲೇಜುಗಳಲ್ಲಿ ಉಪನ್ಯಾಸಕರು/ಶೈಕ್ಷಣಿಕ ಅಧ್ಯಾಪಕರು.ಮಕ್ಕಳ ಆರೋಗ್ಯ ಮತ್ತು ಹೋಮಿಯೋಪತಿಯಲ್ಲಿ ಸಂಶೋಧಕರು.

## ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಇಲ್ಲಿನ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ 2025-26ನೇ ಸಾಲಿನ ನೇಕಾರರ ಪ್ಯಾಕೇಜ್ ಯೋಜನೆಯಡಿ ಎಸ್.ಸಿ.ಎಸ್.ಪಿ, ಟಿ.ಎಸ.ಪಿ, ಎಸ್‌ಎಮ್‌ಇ ಯೋಜನೆಯಡಿ ಸಹಾಯಧನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ಪಾಲುದಾರಿಕೆ ಸಂಸ್ಥೆ/ಕಂಪನಿ/ಜವಳಿ ಸಹಕಾರಿ ಸಂಘ/ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿಸಣ್ಣ (ಎಸ್.ಎಮ್.ಇ) ಘಟಕಗಳನ್ನು ಪ್ರಾರಂಭಿಸುವುದನ್ನು ಉತ್ತೇಜಿಸಲು ಯಂತ್ರೋಪಕರಗಳೊಂದಿಗೆ ಸ್ಥಾಪಿಸುವ ಜವಳಿ ಘಟಕಗಳಿಗೆ ಸರ್ಕಾರದಿಂದ ಶೇ.75ರಷ್ಟು ಬಂಡವಾಳ ಹೂಡಿಕೆ ಸಹಾಯಧನ ಒದಗಿಸುವ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ/ಪಾಲುದಾರಿಕೆ ಸಂಸ್ಥೆ/ಕಂಪನಿ/ಜವಳಿ ಸಹಕಾರಿ ಸಂಘ/ಸಂಸ್ಥೆಯ ವತಿಯಿಂದ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಮ್.ಇ) ಘಟಕಗಳನ್ನು ಸ್ಥಾಪಿಸಲು ಆಸಕ್ತ ಉದ್ದಿಮೆದಾರರಿಂದ ಪೂರ್ಣ ಪ್ರಮಾಣದ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು 2026ರ ಜನವರಿ 23ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರವರ ಕಚೇರಿ, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಉರ್ದು ಶಾಲೆಯ ಹತ್ತಿರ, ಅರಬ್ ಮೊಹಲ್ಲಾ ರಾಯಚೂರು. ಅಥವಾ ದೂರವಾಣಿ ಸಂಖ್ಯೆ:08532-233429ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಿಕ್ಷಕರ ಕ್ಷೇತ್ರದ ಮತದಾರರು ಹೆಸರನ್ನು ಪರಿಶೀಲಿಸಿಕೊಳ್ಳಿ: ಎಡಿಸಿ ಶಿವಾನಂದ

ನೈಜ್ಯ ದೆಸೆ ನ್ಯೂಸ್



**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ಭಾರತ ಚುನಾವಣಾ ಆಯೋಗದ ಸೂಚನೆಯಂತೆ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ಹೆಸರನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ ಸೇರಿದಂತೆ ಆಯಾ ತಹಶೀಲ್ದಾರ್ ಕಚೇರಿ, ಮಹಾನಗರ ಪಾಲಿಕೆಯ ಕಾರ್ಯಾಲಯದಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಹೇಳಿದರು.**

ಡಿಸೆಂಬರ್ 30ರ ಮಂಗಳವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಗೆ ಸಂಬಂಧಿಸಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತ ಚುನಾವಣಾ ಆಯೋಗವು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರನ್ನು ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಶಿಕ್ಷಕರ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯನ್ನಾಗಿ ಹಾಗೂ ಈ ಚುನಾವಣಾ ಕ್ಷೇತ್ರ ವ್ಯಾಪ್ತಿಗೊಳಪಡುವ ವಿಭಾಗದ ಎಲ್ಲಾ ಜಿಲ್ಲಾಧಿಕಾರಿಗಳನ್ನು, ಕುಲಬುರಗಿ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಯ ಆಯುಕ್ತರು, ಕಲಬುರಗಿ ವಿಭಾಗದ ಆಯಾ ಉಪ ವಿಭಾಗಕ್ಕೆ ಸಂಬಂಧಪಟ್ಟ ಎಲ್ಲಾ ಸಹಾಯಕ ಆಯುಕ್ತರು ಹಾಗೂ ವಿಭಾಗದ ಎಲ್ಲಾ ಸಂಬಂಧಪಟ್ಟ ತಾಲೂಕಿನ ತಹಸೀಲ್ದಾರರನ್ನು ಹಾಗೂ ಇತರೆ ತತ್ಸಮಾನ ಅಧಿಕಾರಿಯವರನ್ನು ಸಹಾಯಕ ಮತದಾರರ ನೊಂದಣಾಧಿಕಾರಿಯನ್ನಾಗಿ ನೇಮಿಸಲಾಗಿದೆ ಎಂದರು. ಅರ್ಹತಾ ದಿನಾಂಕ: 01.11.2025ಕ್ಕೆ ಅನ್ವಯಿಸುವಂತೆ ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರದ ಅಂತಿಮ ಮತದಾರರ ಪಟ್ಟಿಯನ್ನು 2025ರ ಡಿಸೆಂಬರ್ 30ರಂದು ಸಂಪೂರ್ಣ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚೂರಪಡಿಸಲಾಗಿದ್ದು, ಮತದಾರರು ತಮ್ಮ ಹೆಸರನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ ಹಾಗೂ ಜಿಲ್ಲೆಯ ಆಯಾ ಸಂಬಂಧಪಟ್ಟ ತಾಲ್ಲೂಕಿನ ತಹಸೀಲ್ದಾರ, ಮಹಾನಗರ ಪಾಲಿಕೆ ಕಾರ್ಯಾಲಯದಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ ಎಂದರು.

ಮತದಾನ ಕೇಂದ್ರಗಳ ವಿವರವನ್ನು ಆಯೋಗದ ಮಾರ್ಗಸೂಚಿಗಳನ್ವಯ 16ಕೀ.ಮೀ ವ್ಯಾಪ್ತಿಗೊಳಪಡುವ ಕನಿಷ್ಠ 30 ಮತದಾರರು ಒಳಪಡುವ ಮತದಾರರಿಗೆ ಮತಗಟ್ಟೆ ಸ್ಥಾಪಿಸಲು ಅವಕಾಶ ಕಲ್ಪಿಸಿದ್ದು, ಅದರಂತೆ ಪ್ರಸ್ತುತವಾಗಿ 145 ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ನಿರಂತರ ನೋಂದಣಿ ಪ್ರಕ್ರಿಯೆಯಲ್ಲಿ ನೋಂದಾಯಿಸಲ್ಪಡುವ ಮತದಾರರಿಗನುಗುಣವಾಗಿ ಆಯೋಗದ ಮಾರ್ಗಸೂಚಿಗಳನ್ವಯ ಮತದಾನ ಕೇಂದ್ರಗಳನ್ನು ಮುಂದಿನ ದಿನಗಳಲ್ಲಿ ಚುನಾವಣಾ ಸಮಯದಲ್ಲಿ ಅಂತಿಮ ಗೊಳಿಸಲಾಗುವುದು ಎಂದರು. ಮತದಾರರಲ್ಲಿ ಮನವಿ: ಇದೊಂದು ನಿರಂತರ ನೋಂದಣಿ ಪ್ರಕ್ರಿಯೆಯಾಗಿರುವ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕದವರೆಗೂ ಅರ್ಹ ಮತದಾರರು ಅವಶ್ಯಕ ದಾಖಲೆಗಳೊಂದಿಗೆ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ.

ಕಾರಣ ಅರ್ಹ ಶಿಕ್ಷಕರು ಹೆಚ್ಚಿನ ಆಸಕ್ತಿ ವಹಿಸಿ ಈ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ಸುಭದ್ರ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಬೇಕೆಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವರಾಜ, ಲಿಂಗಸುಗೂರು ವಿಭಾಗದ ಸಹಾಯಕ ಆಯುಕ್ತರಾದ ಬಸವಣೆಪ್ಪ ಕುಲಶೆಟ್ಟಿ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮ, ಸಿಂಧನೂರು ನಗರಸಭೆಯ ಪೌರಾಯುಕ್ತರಾದ ಶೃತಿ ಕೆ. ಸೇರಿದಂತೆ ಇತರರು ಇದ್ದರು.

# ಸರ್ಕಾರಿ ಭೂಮಿ ಖರೀಸಿದಿ ನಿವೇಶನ ಹಂಚಿಕೆ ಮಾಡಲು ಕೆಆರ್‌ಎಸ್ ಒತ್ತಾಯ



ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಪಾಮನಕಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಲ್ಕರಾಗಿ ಗ್ರಾಮದ ನಿವೇಶನ ರಹಿತರಿಗೆ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮದಿಂದ ವಿವಾದವಿಲ್ಲದ ಸರಕಾರಿ ಭೂಮಿಯನ್ನು ಖರೀದಿ ಹಂಚಿಕೆ ಮಾಡಬೇಕೆಂದು ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕನಾಟಕ ರೈತ ಸಂಘದಿಂದ ಮನವಿ ಸಲ್ಲಿಸಲು ಮೂಲಕ ಮಂಗಳವಾರ ಒತ್ತಾಯಿಸಿದರು.**

ನಂತರ ಸಂತೋಷ ಹಿರೇದಿನ್ನಿ ಮಾತನಾಡಿ ಪಾಮನಕಲ್ಲೂರು ಗ್ರಾ.ಪಂ ವ್ಯಾಪ್ತಿಯ ಚಿಲ್ಕರಾಗಿ ಗ್ರಾಮದಲ್ಲಿ ವಸತಿ ರಹಿತರಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಸೇರಿದಂತೆ ಮಡಿವಾಳ ಸಮಾಜದವರು ಕುರುಬರು, ಕುಂಬಾರು, ವಿಶ್ವಕರ್ಮ, ಈಡಿಗಾ, ಉಪ್ಪಾರ, ಮುಸ್ಲಿಂ ಮುಂತಾದ ಹಿಂದುಳಿದ ವರ್ಗದವರು ಅನೇಕ ವರ್ಷಗಳಿಂದ ವಸತಿ ಇಲ್ಲದೇ ಬಹುಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ರಾಜೀವಗಾಂಧಿ ವಸತಿ ಯೋಜನೆ ನಿಗಮದಿಂದ ನಿವೇಶನ ಯೋಜನೆಯ ಪ್ರಕ್ರಿಯೆಯೂ 2017ರಲ್ಲಿ ಆರಂಭವಾಗಿತ್ತು. ಆದರೆ, ಈ ಯೋಜನೆ ಅನುಷ್ಠಾನಗೊಂಡಿರುವುದಿಲ್ಲ.


ಕೂಡಲೇ ಪಾಮನಕೆಲ್ಲೂರು ಗ್ರಾ.ಪಂ ವ್ಯಾಪ್ತಿಯಲ್ಲಿ ವಿವಾದವಿಲ್ಲದ ಸರಕಾರಿ ಭೂಮಿಯನ್ನು ಖರೀದಿಸಿ ನಿಗಮದಿಂದ ಸೂಚಿಸಲಾದ ನಿಯಮ 5ರ ಪ್ರಕಾರ ಫಲಾನುಭವಿಗಳನ್ನು ಊರಿನಲ್ಲಿ ಗ್ರಾಮಸಭೆ ನಡೆಸಿ ಫಲಾನುಭವಿಗಳ ಪೈಕಿ ಶೇ.50 ರಷ್ಟು ಎಸ್‌ಸಿ, ಸೇ.30ಎಸ್‌ಟಿ ಮತ್ತು ಶೇ.20ರಷ್ಟು 20ರಷ್ಟು ಹಿಂದುಳಿದ ವರ್ಗಗಳ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಒತ್ತಾಯಿಸಿದರು. ಒಂದು ವೇಳೆ ಸರಕಾರ ಹಾಗೂ ನಿಗಮದ ಈ ನಿಯಮಾವಳಿಗಳನ್ನು ಉಲ್ಲಂಘಿಸಿದರೆ ತಾ.ಪಂ ಕಾರ್ಯಾಲಯದ ಮುಂದೆ ಸಂಘಟನೆಯಿಂದ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾರುತಿ ಜಿನ್ನಾಪೂರ, ವೆಂಕಟೇಶ ಚಿಲ್ಕರಾಗಿ, ರಮೇಶ ಚಿಲ್ಕರಾಗಿ, ಭೀಮಣ್ಣ ಚಿಲ್ಕರಾಗಿ, ತಿರುಪತಿ ಮಸ್ಕಿ, ವೀರಭದ್ರಪ್ಪ, ಹುಲುಗಪ್ಪ ಚಿಲ್ಕರಾಗಿ, ಭಾಗಪ್ಪ, ಶಿವಪ್ಪ, ತಿಪ್ಪಣ್ಣ, ಹನುಮಪ್ಪ, ಬಸವರಾಜ ಸೇರಿದಂತೆ ಇನ್ನಿತರರಿದ್ದರು. ಮಸ್ಕಿ ತಾಲೂಕಿನ ಪಾಮನಕಲ್ಲೂರು ಗ್ರಾ.ಪಂ ವ್ಯಾಪ್ತಿಯ ಚಿಲ್ಕರಾಗಿ ಗ್ರಾಮದ ವಸತಿ ರಹಿತರಿಗೆ ನಿವೇಶನ ಹಂಚಿಕೆಗೆ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿದರು.

# ರಾಯಚೂರು ಮಹಾನಗರ ಪಾಲಿಕೆ ಅಧಿಕಾರಿ, ಸಿಬ್ಬಂದಿಗೆ ವಿಶೇಷ ಸಾಮರ್ಥ್ಯವೃದ್ಧಿ ತರಬೇತಿ

ನೈಜ್ಯ ದೆಸೆ ನ್ಯೂಸ್






**ರಾಯಚೂರು: ಡಿಸೆಂಬರ್ 30 (ಕರ್ನಾಟಕ ವಾರ್ತೆ): ರಾಯಚೂರು ಮಹಾನಗರ ಪಾಲಿಕೆಯ ಆಡಳಿತದ ಗುಣಮಟ್ಟ ಮತ್ತು ಸೇವಾ ವಿತರಣೆಯನ್ನು ಹೊಸ ಮಟ್ಟಕ್ಕೇರಿಸುವ ದಿಶೆಯಲ್ಲಿ ಪಾಲಿಕೆಯ ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಎರಡು ದಿನದ ವಿಶೇಷ ಸಾಮರ್ಥ್ಯವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ಡಿ.30ರಂದು ಚಾಲನೆ ನೀಡಲಾಯಿತು.**

ಮಹಾನಗರ ಪಾಲಿಕೆ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರ ನೇತೃತ್ವದಲ್ಲಿ ಡಿಸೆಂಬರ್ 30ರಂದು ನಗರದ ಹಳೆ ನಗರಸಭೆಯ ಸಭಾಂಗಣದಲ್ಲಿ ತರಬೇತಿಗೆ ಚಾಲನೆ ಸಿಕ್ಕಿತು. ಅನುಭವಿ ತಜ್ಞರಾದ ಮಂಗಳೂರಿನ ಸಹಾಯಕ ಪ್ರಾಧ್ಯಾಪಕರು & ತರಬೇತುದಾರರಾದ ಡಾ.ನಂದೀಶ್ ವೈ.ಡಿ., ಮತ್ತು ಮೈಸೂರಿನ ಆಡಳಿತ ತರಬೇತುದಾರರಾದ ಡಾ.ಗಂಗಾಧರ ವೈ.ವಿ. ಅವರು ತರಬೇತಿ ನೀಡಿದರು. ಪಾಲಿಕೆಯ ಕಂದಾಯ ಶಾಖೆ, ಅಡ್ಮಿನ್ ಶಾಖೆ, ಆರೋಗ್ಯ, ಇಂಜಿನಿಯರಿಂಗ್, ಉದ್ಯಾನ, ಲೆಕ್ಕಶಾಖೆ ಹಾಗೂ ಇತರೆ ವಿಭಾಗಗಳ ಸಿಬ್ಬಂದಿಯನ್ನು ಒಳಗೊಂಡು ಎಲ್ಲಾ ಶ್ರೇಣಿಯ ಸಿಬ್ಬಂದಿ ತರಬೇತಿಯಲ್ಲಿ ಭಾಗಿಯಾಗಿದ್ದರು.

# ವಿಕಲಚೇತನರ ಬೇಡಿಕೆಗೆ ಅನುಗುಣವಾಗಿ ಶೇ.5 ಅನುದಾನ ಬಳಕೆ :ಜಶ್ವಾಲ್ ಸಿಂಗ್



ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣದ ಪಂಚಾಯಿತಿ ಕಾರ್ಯಾಲಯದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ನಿರ್ದೇಶನದಂತೆ ವಿಶ್ವ ವಿಕಲಚೇತನರ ದಿನಾಚರಣೆ ಹಾಗೂ ವಿಕಲಚೇತನರ ಸಮನ್ವಯ ಸಭೆ ನಡೆಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳಾದ ಜಶ್ವಾಲ್ ಸಿಂಗ್ ಅವರು, ಪಟ್ಟಣ ಪಂಚಾಯತಿಯ ಶೇ.5 ರ ಅನುದಾನವನ್ನು ವಿಕಲಚೇತನರ ಬೇಡಿಕೆ ಮತ್ತು ಅಗತ್ಯಕ್ಕೆ ಅನುಗುಣವಾಗಿ ಸಮರ್ಪಕವಾಗಿ ಬಳಸಲಾಗುವುದು ಎಂದು ತಿಳಿಸಿದರು.**

ಇದುವರೆಗೆ ಬಾಕಿ ಉಳಿದಿರುವ ಹಿಂದಿನ ವರ್ಷಗಳ ಅನುದಾನವನ್ನೂ ಕ್ರಮಬದ್ಧವಾಗಿ ಬಳಸಿಕೊಂಡು ವಿಕಲಚೇತನರಿಗೆ ಸೌಲಭ್ಯ ಒದಗಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಕರ ವಸೂಲಿಗಾರರಾದ ರಾಘವೇಂದ್ರ, ಸಂಕಲ್ಪ ವಿಕಲಚೇತನರ ಒಕ್ಕೂಟದ ಗೌರವಾಧ್ಯಕ್ಷರಾದ ದೇಸಾಯಿ ದೊತರಬಂಡಿ, ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶಿವಕುಮಾರ್ ಚಲ್ಮಲ್, ಜಿಲ್ಲಾ ಉಪಾಧ್ಯಕ್ಷರಾದ ಸಾವಿತ್ರಮ್ಮ, ವಿಕಲಚೇತನರ ಪುನರ್ವಸತಿ ಕಾರ್ಯಕರ್ತರ ಒಕ್ಕೂಟದ ಜಿಲ್ಲಾಧ್ಯಕ್ಷರಾದ ಶೇಖರಪ್ಪ ಮುರ್ಕಿಗುಡ್ಡ, ನಗರ ಪುನರ್ವಸತಿ ಕಾರ್ಯಕರ್ತರಾದ ಹಿರಲಾಲ್ ಸಿಂಗ್, ವಿಕಲಚೇತನ ಕಾರ್ಯಕರ್ತರಾದ ನಂದಕುಮಾರ್, ಅಯ್ಯಾಳಿ, ಮಲ್ಲಿಕಾರ್ಜುನ ಸೇರಿದಂತೆ ಅನೇಕ ವಿಕಲಚೇತನ ಬಂಧುಗಳು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದರು. ಸಮನ್ವಯ ಸಭೆಯಲ್ಲಿ ವಿಕಲಚೇತನರ ಹಕ್ಕುಗಳು, ಸರ್ಕಾರಿ ಸೌಲಭ್ಯಗಳ ಸಮರ್ಪಕ ಅನುಷ್ಠಾನ, ಪುನರ್ವಸತಿ ಹಾಗೂ ಗೌರವಪೂರ್ಣ ಬದುಕಿನ ಅಗತ್ಯತೆ ಕುರಿತು ಚರ್ಚೆ ನಡೆಯಿತು.

# ಉಚಿತ ಮಹಿಳಾ ಕ್ಷೇಮಾ ತಪಾಸಣೆ ಶಿಬಿರಕ್ಕೆ ಗ್ರಾ.ಪಂ ಅಧ್ಯಕ್ಷ ನೀಲಕಂಠಪ್ಪ ಚಾಲನೆ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಬಳಗಾನೂರು ವ್ಯಾಪ್ತಿಯ ಉದ್ಬಾಳ ಗ್ರಾಮದಲ್ಲಿ ಪಿಪಿಎಚ್‌ಎಫ್, ಪ್ರಣಾ ಯೋಜನೆ ,ಜಿಇ ಹೆಲ್ತ್‌ಕೇರ್ ಸಂಯುಕ್ತಾಶ್ರಯದಲ್ಲಿ ಜಂಟಿಯಾಗಿ ಉಚಿತ ಮಹಿಳಾ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಬಾಳ ಗ್ರಾ.ಪಂ ಅಧ್ಯಕ್ಷರು ನೀಲಕಂಠಪ್ಪ ಉದ್ಘಾಟಿಸಿದರು.**




ನಂತರ ಪ್ರಾಥಮಿಕ ಆರೋಗ್ಯ ಕೇಂದ್ರ ಬಳಗನೂರು ವೈದ್ಯಕೀಯ ಅಧಿಕಾರಿ ಡಾ.ದೌವಲಸಾಬ್ ಮಾತನಾಡಿ ಪ್ರತಿಯೊಂದ ಮನೆಯಲ್ಲಿ ಬಿಪಿ ಶುಗರ್ ಕಾಯಿಲೆವಿರುವ ಜನವರುವ ಈ ದಿನದಲ್ಲಿ ಅಸಾಂಕ್ರಮಿಕ ಕಾಯಿಲೆಗಳು ಬರುವ ಮುನ್ನ ನಿಯಮಿತ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳು ಒಂದೇ ಸೂರಿನಡಿ ಗ್ರಾಮದ ಮಹಿಳೆಯರಿಗೆ ಆರೋಗ್ಯ ತಪಾಸಣೆ ಮಾಡಿಸುವ ಉದ್ದೇಶದಿಂದ ಗರ್ಭಗಂಠ ಕ್ಯಾನ್ಸರ್ ಹಾಗೂ ಸ್ತನ ಕ್ಯಾನ್ಸರ್ ಅಧಿಕ ರಕ್ತದ ಒತ್ತಡ ಎತ್ತರ ತೂಕ ಹಾಗೂ ಬಿಪಿ ಶುಗರ್ ತಪಾಸಣೆ, ಕಣ್ಣು ತಪಾಸಣೆ, ಬಾಯಿ ಮತ್ತು ಹಲ್ಲು ತಪಾಸಣೆ, ಆರ್‌ಎಫ್‌ಟಿ ಎಲ್‌ಎಫ್‌ಟಿ ಪರೀಕ್ಷೆ ಮತ್ತು ಪೌಷ್ಟಿಕ ಆಹಾರ ಸೇವನೆ ಕುರಿತು ಗ್ರಾಮೀಣ ಜನರಿಗೆ ಆರ್ಥಿಕ ವೆಚ್ಚ ತಗ್ಗಿಸುವ ಸಲುವಾಗಿ ಉಚಿತವಾಗಿ ಮಾನಸಿಕ ಆರೋಗ್ಯದ ಬಗ್ಗೆ ಮಾಹಿತಿ ಮತ್ತು ಆಪ್ತ ಸಮಾಲೋಚನೆಯನ್ನ ಪೀಪಲ್ ಟು ಪೀಪಲ್ ಹೆಲ್ತ್ ಫೌಂಡೇಶನ್ ಜಿ ಇ ಹೆಲ್ತ್ ಕೇರ್ ಸಂಸ್ಥೆಯವರು ತಜ್ಞರಿಂದ ಮಹಿಳೆಯರಿಗೆ ತಪಾಸಣೆಯನ್ನ ಉಚಿತವಾಗಿ ಮಾಡಿಸುತ್ತಿದ್ದಾರೆ ಎಂದರು.

ನಂತರ ಉದ್ಬಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಸವರಾಜ್ ಇವರು ಮಾತನಾಡಿ ಪೀಪಲ್ ಟು ಪೀಪಲ್ ಸಂಸ್ಥೆಯವರು ಸಾರ್ವಜನಿಕರಿಗೆ ಉಚಿತವಾಗಿ ಆರೋಗ್ಯ ಸೇವೆ ನೀಡಲು ಬಂದಿದ್ದಾರೆ. ಗ್ರಾಮಸ್ಥರು ಈ ಕಾರ್ಯಕ್ರಮವನ್ನು ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ನಂತರ ದಂತವೈದ್ಯರು ಡಾ.ದೇವರಾಜ ಅವರು ಮಾತನಾಡಿ ಸ್ತ್ರೀರೋಗ ತಜ್ಞರನ್ನ ಮತ್ತು ಹಲ್ಲು ಕಣ್ಣು ತಜ್ಞರನ್ನ ಗ್ರಾಮಕ್ಕೆ ಕರೇದು ಮಹಿಳೆಯರಿಗೆ ಉಚಿತವಾಗಿ ತಪಾಸಣೆ ಮಾಡಿಸೋದು ಶ್ಲಾಘನೀಯವಾದದ್ದು ಎಂದರು. ಈ ಕಾರ್ಯಕ್ರಮದಲ್ಲಿ ಪ್ರಸ್ತಾವಿಕ ಮಾತನಾಡಿದ ಪೀಪಲ್ ಟು ಪೀಪಲ್ ಸಂಸ್ಥೆಯ ಪ್ರೋಗ್ರಾಮ್ ಮ್ಯಾನೇಜರ್ ಮಲ್ಲೈಕಾ ಅಮೀನ ಇವರು ಕಳೇದ ಒಂದು ವರ್ಷದಿಂದ ನಮ್ಮ ಸಂಸ್ಥೆಯು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಹಕಾರದಿಂದ ವೈಧ್ಯರು ಮತ್ತು ಸಿಬ್ಬಂಧಿಗಳು ಆಶಾ ಕಾರ್ಯಕರ್ತರ ಗ್ರಾಮಸ್ಥರ ಬೆಂಬಲದೊಂದಿಗೆ ಮಹಿಳಾ ಕ್ಷೇಮಾ ತಪಾಸಣೆ ಶಿಬಿರ ಕೈಗೊಳ್ಳುತ್ತಾ ಬಂದಿದ್ದೇವೆ.

ಉಚಿತವಾಗಿ ಈ ಶಿಬಿರದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಎಲ್ಲಾ ಪರೀಕ್ಷೆಗಳು ಉಚಿತವಾಗಿ ನೀಡಲು ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ, ಬಾಯಿ ಕ್ಯಾನ್ಸರ್ ತಪಾಸಣೆ, ಬಿಪಿ, ಸಕ್ಕರೆ ತಪಾಸಣೆ, ಕಣ್ಣು ತಪಾಸಣೆ, ಎಚ್‌ಬಿ ಪರೀಕ್ಷೆ, ಎಲ್‌ಎಫ್‌ಟಿ/ಆರ್‌ಎಫ್‌ಟಿ, ಎಚ್‌ಬಿಎ1ಸಿ ತಪಾಸಣೆ,ಉಚಿತ ಅಭಾ ಕಾರ್ಡ್ ನೋಂದಣಿ ಮಾಡುತ್ತಿದ್ದೇವೆ ದಯವಿಟ್ಟು ಸದುಪಾಯೋಗ ಪಡೆದುಕೊಳ್ಳಲು ಮನವಿ ಮಾಡಿಕೊಂಡರು. ಈ ಸಂದರ್ಭದಲ್ಲಿ ಉದ್ಬಾಳ ಗ್ರಾಮ ಪಂಚಾಯಿತಿ ಅಧ್ಯಕ್ಷರು ನೀಲಕಂಠಪ್ಪ ಪಿಡಿಓ ಬಸವರಾಜ ಡಾ.ದೌವಲಸಾಬ್ ಡಾ.ಸುನೀಲ್, ಮಹಿಳಾ ವೈದ್ಯೆ ಡಾ.ಸೌಮ್ಯ ದಂತವೈಧ್ಯರು ಡಾ.ನಾಗವೇಣಿ,ಡಾ. ದೇವರಾಜ ಮಸ್ಕಿ ತಾ.ಪಂಐಇಸಿ ಸತೀಶ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂಧಿಗಳು ಹಾಗೂ ಪಿಪಿಹೆಚ್‌ಎಫ್ ಸಿಬ್ಬಂಧಿ ವರ್ಗ ಗ್ರಾಮಸ್ಥರು ಸ್ವಯಂ ಸೇವಕರು ಇದ್ದರು. ಈ ಸಂದರ್ಭದಲ್ಲಿ ಮಲ್ಲೈಕಾ ಅಮೀನ,ಉದ್ಬಾಳ ಗ್ರಾಮ ಪಂಚಾಯಿತಿ ಅಧ್ಯಕ್ಷರು ನೀಲಕಂಠಪ್ಪ ಪಿಡಿಓ ಬಸವರಾಜ ಡಾ.ದೌವಲಸಾಬ್ ಡಾ.ಸುನೀಲ್, ಮಹಿಳಾ ವೈದ್ಯೆ ಡಾ.ಸೌಮ್ಯ ದಂತವೈಧ್ಯರು ಡಾ.ನಾಗವೇಣಿ,ಡಾ. ದೇವರಾಜ ಮಸ್ಕಿ ತಾ.ಪಂಐಇಸಿ ಸತೀಶ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂಧಿಗಳು ಹಾಗೂ ಪಿಪಿಹೆಚ್‌ಎಫ್ ಸಿಬ್ಬಂಧಿ ವರ್ಗ ಗ್ರಾಮಸ್ಥರು ಸ್ವಯಂ ಸೇವಕರು ಇದ್ದರು.